## KARNATAKA TEACHERS ELIGIBILITY TEST-2024

### PAPER -2 : PART- I - LANGUAGE-I KEY ANSWERS

| Q. No | Kannada | English | Urdu | Tamil | Telugu | Marathi | Hindi | Sanskrit |
|---|---|---|---|---|---|---|---|---|
| 1 | 3 | 2 | 2 | 3 | 1 | 2 | 2 | 2 |
| 2 | 3 | 1 | 1 | 2 | 2 | 4 | 1 | 3 |
| 3 | 1 | 3 | 1 | 4 | 1 | 1 | 1 | 4 |
| 4 | 2 | 3 | 4 | 1 | 3 | 3 | 3 | 1 |
| 5 | 1 | 1 | 1 | 2 | 2 | 4 | 3 | 3 |
| 6 | 4 | 4 | 2 | 3 | 4 | 2 | 2 | 2 |
| 7 | 3 | 2 | 3 | 4 | 3 | 3 | 4 | 3 |
| 8 | 4 | 3 | 1 | 1 | 4 | 4 | 1 | 4 |
| 9 | 1 | 4 | 3 | 3 | 4 | 1 | 1 | 1 |
| 10 | 4 | 3 | 4 | 4 | 2 | 3 | 2 | 2 |
| 11 | 3 | 2 | 3 | 2 | 2 | 2 | 3 | 3 |
| 12 | 2 | 1 | 1 | 1 | 1 | 3 | 3 | 4 |
| 13 | 4 | 2 | 2 | 2 | 4 | 4 | 2 | 1 |
| 14 | 4 | 3 | 4 | 4 | 2 | 1 | 3 | 3 |
| 15 | 1 | 1 | 2 | 2 | 4 | 3 | 2 | 1 |
| 16 | 2 | 2 | 4 | 2 | 2 | 1 | 2 | 3 |
| 17 | 3 | 1 | 1 | 1 | 3 | 3 | 3 | 1 |
| 18 | 4 | 2 | 1 | 3 | 4 | 2 | 4 | 2 |
| 19 | 4 | 3 | 3 | 1 | 1 | 4 | 1 | 4 |
| 20 | 3 | 1 | 4 | 4 | 2 | 2 | 4 | 2 |
| 21 | 2 | 3 | 3 | 1 | 4 | 3 | 2 | 4 |
| 22 | 4 | 1 | 1 | 2 | 3 | 1 | 3 | 3 |
| 23 | 3 | 1 | 2 | 3 | 1 | 4 | 1 | 1 |
| 24 | 3 | 1 | 4 | 2 | 3 | 1 | 4 | 2 |
| 25 | 1 | 2 | 1 | 3 | 4 | 2 | 2 | 2 |
| 26 | 3 | 4 | 2 | 4 | 2 | 3 | 3 | 1 |
| 27 | 2 | 2 | 4 | 4 | 4 | 2 | 4 | 3 |
| 28 | 1 | 3 | 1 | 2 | 2 | 1 | 1 | 4 |
| 29 | 1 | 3 | 3 | 1 | 4 | 4 | 3 | 1 |
| 30 | 1 | 3 | 2 | 4 | 3 | 2 | 1 | 3 |



SHIKARAT.COM

| KARNATAKA TEACHERS ELIGIBILITY TEST-2024 | | | | | | | | |
|---|---|---|---|---|---|---|---|---|
| PAPER -2 : PART-II - LANGUAGE-II KEY ANSWERS | | | | | | | | |
| Q. No | Kannada | English | Urdu | Tamil | Telugu | Marathi | Hindi | Sanskrit |
| 31 | 2 | 2 | 2 | 2 | 3 | 2 | 3 | 1 |
| 32 | 3 | 4 | 3 | 1 | 2 | 1 | 2 | 2 |
| 33 | 4 | 1 | 2 | 3 | 4 | 4 | 4 | 3 |
| 34 | 2 | 2 | 3 | 3 | 1 | 3 | 4 | 4 |
| 35 | 3 | 3 | 3 | 1 | 2 | 2 | 3 | 3 |
| 36 | 1 | 4 | 1 | 4 | 3 | 1 | 1 | 2 |
| 37 | 4 | 2 | 2 | 1 | 2 | 4 | 4 | 4 |
| 38 | 2 | 1 | 3 | 3 | 1 | 3 | 4 | 1 |
| 39 | 2 | 4 | 2 | 2 | 2 | 2 | 2 | 4 |
| 40 | 3 | 1 | 4 | 3 | 3 | 4 | 4 | 3 |
| 41 | 4 | 3 | 1 | 1 | 1 | 3 | 2 | 2 |
| 42 | 1 | 2 | 2 | 4 | 4 | 1 | 1 | 1 |
| 43 | 3 | 3 | 4 | 3 | 1 | 4 | 2 | 2 |
| 44 | 4 | 1 | 3 | 1 | 4 | 3 | 4 | 3 |
| 45 | 1 | 4 | 4 | 2 | 3 | 2 | 1 | 4 |
| 46 | 2 | 3 | 2 | 1 | 1 | 1 | 3 | 2 |
| 47 | 3 | 3 | 3 | 2 | 2 | 4 | 4 | 3 |
| 48 | 2 | 4 | 3 | 4 | 3 | 4 | 1 | 1 |
| 49 | 1 | 1 | 2 | 2 | 4 | 1 | 2 | 4 |
| 50 | 4 | 2 | 3 | 3 | 4 | 3 | 3 | 3 |
| 51 | 2 | 1 | 4 | 4 | 3 | 2 | 3 | 4 |
| 52 | 4 | 1 | 2 | 1 | 2 | 2 | 4 | 3 |
| 53 | 3 | 3 | 1 | 4 | 1 | 1 | 3 | 2 |
| 54 | 3 | 2 | 2 | 2 | 3 | 3 | 3 | 4 |
| 55 | 3 | 4 | 1 | 4 | 4 | 2 | 2 | 3 |
| 56 | 2 | 1 | 2 | 2 | 3 | 1 | 3 | 1 |
| 57 | 1 | 4 | 1 | 2 | 1 | 4 | 4 | 1 |
| 58 | 3 | 1 | 1 | 1 | 3 | 3 | 2 | 1 |
| 59 | 3 | 2 | 2 | 3 | 2 | 4 | 4 | 4 |
| 60 | 3 | 2 | 1 | 3 | 1 | 2 | 2 | 2 |



SHIKARAT.COM

| KARNATAKA TEACHERS ELIGIBILITY TEST-2024 | | | | | |
|---|---|---|---|---|---|
| Paper-2: Part-III and IV - Child Development & Pedagogy, Mathematics & Science<br>Key Answers (Kannada,English,Urdu,Tamil,Telugu,Marathi and Hindi medium) | | | | | |
| **Q. NO** | **Child Development & Pedagogy** | **Q.NO** | **Mathematics & Science** | **Q.NO** | **Mathematics & Science** |
| **61** | 2 | **91** | 3 | **121** | 1 |
| **62** | 1 | **92** | 1 | **122** | 2 |
| **63** | 2 | **93** | 2 | **123** | 4 |
| **64** | 4 | **94** | 4 | **124** | 3 |
| **65** | 1 | **95** | 2 | **125** | 1 |
| **66** | 2 | **96** | 1 | **126** | 2 |
| **67** | 2 | **97** | 4 | **127** | 3 |
| **68** | 2 | **98** | 3 | **128** | 4 |
| **69** | 1 | **99** | 4 | **129** | 1 |
| **70** | 4 | **100** | 1 | **130** | 3 |
| **71** | 3 | **101** | 2 | **131** | 4 |
| **72** | 4 | **102** | 4 | **132** | 2 |
| **73** | 1 | **103** | 4 | **133** | 1 |
| **74** | 2 | **104** | 1 | **134** | 2 |
| **75** | 3 | **105** | 3 | **135** | 2 |
| **76** | 3 | **106** | 1 | **136** | 3 |
| **77** | 2 | **107** | 2 | **137** | 2 |
| **78** | 1 | **108** | 3 | **138** | 4 |
| **79** | 4 | **109** | 3 | **139** | 3 |
| **80** | 4 | **110** | 4 | **140** | 4 |
| **81** | 1 | **111** | 3 | **141** | 2 |
| **82** | 1 | **112** | 3 | **142** | 1 |
| **83** | 3 | **113** | 2 | **143** | 1 |
| **84** | 2 | **114** | 2 | **144** | 3 |
| **85** | 3 | **115** | 2 | **145** | 4 |
| **86** | 4 | **116** | 3 | **146** | 3 |
| **87** | 4 | **117** | 1 | **147** | 2 |
| **88** | 2 | **118** | 3 | **148** | 1 |
| **89** | 4 | **119** | 2 | **149** | 3 |
| **90** | 3 | **120** | 1 | **150** | 1 |



SHIKARAT.COM

| KARNATAKA TEACHERS ELIGIBILITY TEST-2024 | | | |
|---|---|---|---|
| PAPER-2 : PART-IV Social Science (Kannada,English,Urdu,Tamil,Telugu,Marathi and Hindi medium) | | | |
| **Q.NO** | **Social Science** | **Q.NO** | **Social Science** |
| **91** | 3 | **121** | 4 |
| **92** | 1 | **122** | 3 |
| **93** | 4 | **123** | 2 |
| **94** | 2 | **124** | 1 |
| **95** | 2 | **125** | 3 |
| **96** | 1 | **126** | 4 |
| **97** | 4 | **127** | 2 |
| **98** | 4 | **128** | 1 |
| **99** | 1 | **129** | 2 |
| **100** | 2 | **130** | 4 |
| **101** | 4 | **131** | 3 |
| **102** | 1 | **132** | 3 |
| **103** | 2 | **133** | 2 |
| **104** | 1 | **134** | 3 |
| **105** | 2 | **135** | 4 |
| **106** | 3 | **136** | 1 |
| **107** | 2 | **137** | 2 |
| **108** | 3 | **138** | 3 |
| **109** | 3 | **139** | 3 |
| **110** | 4 | **140** | 2 |
| **111** | 2 | **141** | 4 |
| **112** | 4 | **142** | 1 |
| **113** | 3 | **143** | 3 |
| **114** | 4 | **144** | 2 |
| **115** | 1 | **145** | 2 |
| **116** | 3 | **146** | 4 |
| **117** | 4 | **147** | 2 |
| **118** | 2 | **148** | 2 |
| **119** | 1 | **149** | 3 |
| **120** | 3 | **150** | 2 |



SHIKARAT.COM

stion Booklet Sl. No.

KMSS

SHIKARAT.COM
Online Education

# QUESTION PAPER BOOKLET – PAPER – II

## (KANNADA MEDIUM SOCIAL SCIENCE ONLY)

**SUBJECTS : Language – I, Language – II, Child Development and Pedagogy, Social Science**

**Maximum Marks : 150** **02.00 P.M. to 04.30 P.M.** **Max. Time : 2.30 Hours**

## INSTRUCTIONS TO THE CANDIDATES (Read Carefully)

**Note : Candidates are instructed to confirm**

- **Whether pre-printed O.M.R. has your name and application number printed on it.**
- **Whether pre-printed O.M.R. Sheet No. and QP Booklet No. are same. If the candidate uses the O.M.R./QP booklet which doesn't belong to him/her, such O.M.R. sheets are not considered for evaluation.**
- **Fill and shade the application number in the Sl. Number 11 of the O.M.R. sheet.**

1. The sealed Question Paper Booklet contains 150 questions and O.M.R. Answer Sheet. Verify whether the given Question Paper Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in case of any discrepancies/doubt the question in English Medium is considered as valid.**
3. The Question Paper contains four Parts I, II, III and IV consisting of **150** Objective Type Questions, **EACH QUESTION CARRYING ONE MARK.**

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 39 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 40 to 77 |
| Part – III | CDP (Kannada) | 61 to 90 | 78 to 81 |
| Part – III | CDP (English) | 61 to 90 | 82 to 85 |
| Part – IV | Social Science (Kannada) | 91 to 150 | 86 to 99 |
| Part – IV | Social Science (English) | 91 to 150 | 100 to 112 |

4. **Part – I contains 30 Questions for the Language – I and Part – II contains 30 Questions for the Language – II. In this Question Paper Booklet Questions pertaining to all Languages have been given. The Languages being answered must tally with the Languages opted by the candidate in online application.**
5. **Questions related to Part – III : Child Development and Pedagogy (Q. No. 61 to 90), Part – IV : Social Science (Q. No. 91 to 150) are given both in Kannada and English medium in the Question Paper Booklet. The Questions answered must tally with the medium opted in the online application.**
6. **All the entries in the circle must be made with BLUE OR BLACK BALL POINT PEN ONLY. Any alteration in the answer counts as invalid. Usage of whitener/overwriting on OMR Answer Sheet is not permitted and such answer sheet is not considered for evaluation.**
7. Each candidate is given carbonless O.M.R. answer sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
8. Calculator, mobile phone and any other electronic devices are not allowed.
9. **If a candidate is found committing malpractice, necessary action will be taken against such candidate as per the examination rules.**



2024

SHIKARAT.COM

## PART – I

### ಭಾಷೆ – I

### ಕನ್ನಡ

**ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಓದಿ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿ :**

ಈಗ ಅಮೇರಿಕಾದ ದಕ್ಷಿಣ ಕೆರೋಲಿನಾದಲ್ಲಿ ಮೇದರ ಬುಟ್ಟಿಗಳಿಗೆ ತುಂಬಾ ಬೇಡಿಕೆ. ಈ ಬುಟ್ಟಿಗಳನ್ನು ಹೆಣೆಯುವವರೆಲ್ಲಾ ಅಮೇರಿಕನ್ ನೀಗ್ರೋ ಹೆಂಗಸರು. ಇವರು ಆಫ್ರಿಕಾದಿಂದ ಮುನ್ನೂರು ವರ್ಷಗಳ ಹಿಂದೆ ಗುಲಾಮರಾಗಿ ಸೆರೆ ಸಿಕ್ಕು ಇಲ್ಲಿಗೆ ಬಂದವರು. ಹದಿನೆಂಟನೇ ಶತಮಾನದಲ್ಲಿ ಕೆರೋಲಿನಾದ ತೋಟಗಾರರು ಇವರನ್ನು ಭತ್ತ ಬೆಳೆಯಲು ಕೊಂಡುತಂದರು. ಭತ್ತ ಬೆಳೆಯುತ್ತಿದ್ದಾಗ ಬೆಳಗಿನ ಹೊತ್ತು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಆಳುಗಳು ಸಂಜೆಯೆಲ್ಲಾ ಭತ್ತದ ಹುಲ್ಲು ಮತ್ತು ನದೀ ತೀರದಲ್ಲಿ ದೊರೆಯುವ ಜೊಂಡನ್ನು ಉಪಯೋಗಿಸಿಕೊಂಡು ತಮಗೆ ಅಗತ್ಯವಾದ ವಸ್ತುಗಳನ್ನು ಹೆಣೆಯುತ್ತಿದ್ದರು. ಇವರು ನಮ್ಮ ಮೇದರಂತೆ ಎಳೆಗಳನ್ನು ಒಂದರೊಳಗೊಂದರಂತೆ ಹೊಗಿಸಿ ಬುಟ್ಟಿ ಹೆಣೆಯುವುದಿಲ್ಲ. ಅದರ ಬದಲು ಬೆತ್ತದಂಥ ಕಿರುಬಿದಿರಿನಿಂದ ದಾರದ ಎಳೆಗಳನ್ನು ತಯಾರಿಸಿ ಒಂದೊಂದು ಸುತ್ತಿಗೂ ಕಟ್ಟಿ ಬಿಗಿಮಾಡುತ್ತಾ ಬುಟ್ಟಿ ರೂಪಿಸುತ್ತಾರೆ. ಆದರೆ ಇವರ ಭತ್ತದ ರಾಜ್ಯ ಬಹಳ ದಿನ ಉಳಿಯಲಿಲ್ಲ. ಅಮೇರಿಕಾದಲ್ಲಿ ಅಂತರ್ಯುದ್ಧ ಆರಂಭವಾಗಿ ಭತ್ತಕ್ಕೆ ಗಿರಾಕಿಗಳು ಕಡಿಮೆಯಾದರು. ಬ್ರೆಡ್ ಪ್ರಧಾನ ಆಹಾರವಾದ್ದರಿಂದ ಎಲ್ಲರೂ ಗೋಧಿಯನ್ನೇ ಅವಲಂಬಿಸಿದರು. ಅಂತರ್ಯುದ್ಧದ ನಂತರ ಮೂವತ್ತು ವರ್ಷಗಳ ತರುವಾಯ ಭಾರೀ ಬಿರುಗಾಳಿಯ ಅನಾಹುತದಲ್ಲಿ ಇವರ ಹಳ್ಳಿಗಳೂ ಭತ್ತದ ಗದ್ದೆಗಳೂ ನಾಶವಾದುವು.

ಆದರೂ ಪರಂಪರೆಯಿಂದ ಬಂದಿದ್ದ ತಮ್ಮ ಬುಟ್ಟಿ ಹೆಣೆಗಾರಿಕೆಯನ್ನು ಆಫ್ರಿಕನ್ ಹೆಂಗಸರು ಕೈಬಿಡಲಿಲ್ಲ. ಇಪ್ಪತ್ತನೇ ಶತಮಾನದಲ್ಲಿ ಇವರ ಕಲಾತ್ಮಕ ಬುಟ್ಟಿಗಳಿಗೆ ಬೇಡಿಕೆ ಅಧಿಕವಾಯ್ತು. ಇವರೇ ಅಮೇರಿಕಾದ ಹೈವೇಗಳ ಪಕ್ಕ ಬಯಲು ಮಾರುಕಟ್ಟೆಗಳನ್ನು ರೂಪಿಸಿಕೊಂಡು ತಮ್ಮ ಕರಕುಶಲ ವಸ್ತುಗಳನ್ನು ಮಾರತೊಡಗಿದರು. ಇವರ ಬಯಲು ಮಾರುಕಟ್ಟೆಗಳು ನಮ್ಮ ಸಂತೆಗಳನ್ನು ಹೋಲುತ್ತವೆ. ಅಮೇರಿಕಾದ ಸೂಪರ್ ಮಾರ್ಕೆಟ್‌ಗಳಿಗಿಂತಲೂ ಜನಪ್ರಿಯವಾಗಿವೆ.

1. ಅಮೇರಿಕಾದಲ್ಲಿ ಅಂತರ್ಯುದ್ಧ ಆರಂಭವಾಗಿ ಯಾವುದಕ್ಕೆ ಗಿರಾಕಿಗಳು ಕಡಿಮೆಯಾದರು ?
   (1) ಬ್ರೆಡ್ (2) ಗೋಧಿ (3) ಭತ್ತ (4) ಜೊಂಡು

2. ಮೇದರ ಬುಟ್ಟಿಗಳಿಗೆ ಇಲ್ಲಿ ತುಂಬಾ ಬೇಡಿಕೆ
   (1) ಅಮೇರಿಕಾದ ಉತ್ತರ ಕೆರೋಲಿನಾ
   (2) ಆಫ್ರಿಕಾದ ದಕ್ಷಿಣ ಕೆರೋಲಿನಾ
   (3) ಅಮೇರಿಕಾದ ದಕ್ಷಿಣ ಕೆರೋಲಿನಾ
   (4) ಆಫ್ರಿಕಾದ ಉತ್ತರ ಕೆರೋಲಿನಾ

3. ಇವು ಅಮೇರಿಕಾದ ಸೂಪರ್ ಮಾರ್ಕೆಟ್‌ಗಳಿಗಿಂತಲೂ ಜನಪ್ರಿಯವಾಗಿವೆ
   (1) ಬಯಲು ಮಾರುಕಟ್ಟೆಗಳು
   (2) ಕರಕುಶಲ ವಸ್ತುಗಳು
   (3) ಮೇದರ ಬುಟ್ಟಿಗಳು
   (4) ಕಲಾತ್ಮಕ ಬುಟ್ಟಿಗಳು



SHIKARAT.COM

4. ಇವುಗಳಲ್ಲಿ ಸರಿಯಾದ ಹೇಳಿಕೆಯನ್ನು ಗುರುತಿಸಿ.

(1) ಬ್ರೆಡ್ ಪ್ರಧಾನ ಆಹಾರವಾದ್ದರಿಂದ ಎಲ್ಲರೂ ಭತ್ತವನ್ನೇ ಅವಲಂಬಿಸಿದರು.

(2) ಪರಂಪರೆಯಿಂದ ಬಂದಿದ್ದ ತಮ್ಮ ಬುಟ್ಟಿ ಹೆಣೆಗಾರಿಕೆಯನ್ನು ಆಫ್ರಿಕನ್ ಹೆಂಗಸರು ಕೈಬಿಡಲಿಲ್ಲ.

(3) ಇವರ ಬಯಲು ಮಾರುಕಟ್ಟೆಗಳು ನಮ್ಮ ಹಳ್ಳಿಯ ಪಂಚಾಯಿತಿಗಳನ್ನು ಹೋಲುತ್ತವೆ.

(4) ಇವರ ಬಯಲು ಮಾರುಕಟ್ಟೆಗಳು ಆಫ್ರಿಕಾದ ಸೂಪರ್ ಮಾರ್ಕೆಟ್‌ಗಳಿಗಿಂತಲೂ ಜನಪ್ರಿಯವಾಗಿವೆ.

5. ಕಲಾತ್ಮಕವಾದ ಭತ್ತದ ಬುಟ್ಟಿಯನ್ನು ಈ ವಸ್ತುಗಳನ್ನು ಉಪಯೋಗಿಸಿಕೊಂಡು ಹೆಣೆಯುತ್ತಿದ್ದರು

(1) ಭತ್ತದ ಹುಲ್ಲು ಮತ್ತು ನದೀ ತೀರದಲ್ಲಿ ದೊರೆಯುವ ಜೊಂಡು

(2) ಗೋಧಿ ಹುಲ್ಲು ಮತ್ತು ಸಮುದ್ರ ತೀರದಲ್ಲಿರುವ ಜೊಂಡು

(3) ಭತ್ತದ ಹುಲ್ಲು ಮತ್ತು ಕೆರೆಯ ತೀರದ ಮರಳು

(4) ಗೋಧಿ ಹುಲ್ಲು ಮತ್ತು ಸಾಗರ ತೀರದಲ್ಲಿರುವ ಜೊಂಡು

6. ''ಇವರು ನಮ್ಮ ಮೇದರಂತೆ ಎಳೆಗಳನ್ನು ಒಂದರೊಳಗೊಂದರಂತೆ ಹೊಗಿಸಿ ಬುಟ್ಟಿ ಹೆಣೆಯುವುದಿಲ್ಲ'' ಇಲ್ಲಿ 'ಇವರು' ಎಂಬ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ

(1) ಕೃದಂತ
(2) ತದ್ಧಿತಾಂತ
(3) ಕ್ರಿಯಾಪದ
(4) ಸರ್ವನಾಮ

7. ಇವರ ಭತ್ತದ ರಾಜ್ಯ ಬಹಳ ದಿನ ಉಳಿಯದಿರಲು ಕಾರಣ :

I. ಅಮೇರಿಕಾದಲ್ಲಿ ಅಂತರ್ಯುದ್ಧ ಆರಂಭವಾಗಿ 'ಭತ್ತ'ಕ್ಕೆ ಗಿರಾಕಿಗಳು ಕಡಿಮೆಯಾದರು.

II. 'ಬ್ರೆಡ್' ಪ್ರಧಾನ ಆಹಾರವಾದ್ದರಿಂದ ಎಲ್ಲರೂ ಗೋಧಿಯನ್ನೇ ಅವಲಂಬಿಸಿದರು.

III. ಅಂತರ್ಯುದ್ಧದ ನಂತರ ಮೂವತ್ತು ವರ್ಷಗಳ ತರುವಾಯ ಭಾರೀ ಬಿರುಗಾಳಿಯ ಅನಾಹುತದಲ್ಲಿ ಇವರ ಹಳ್ಳಿಗಳೂ ಭತ್ತದ ಗದ್ದೆಗಳೂ ನಾಶವಾಗಲಿಲ್ಲ.

ಇವುಗಳಲ್ಲಿ ಸರಿಯಾದ ಉತ್ತರ ಗುರುತಿಸಿ.

(1) I ಮತ್ತು II ಸರಿಯಾಗಿಲ್ಲ
(2) II ಮತ್ತು III ಸರಿಯಾಗಿವೆ
(3) I ಮತ್ತು II ಸರಿಯಾಗಿವೆ
(4) I, II ಮತ್ತು III ಸರಿಯಾಗಿವೆ

8. 'ತರುವಾಯ' ಎಂಬ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(1) ಅವಧಾರಣಾರ್ಥಕಾವ್ಯಯ
(2) ಕ್ರಿಯಾರ್ಥಕಾವ್ಯಯ
(3) ಸಂಬಂಧಾರ್ಥಕಾವ್ಯಯ
(4) ಸಾಮಾನ್ಯಾರ್ಥಕಾವ್ಯಯ



SHIKARAT.COM

ಸೂಚನೆ : ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9 ರಿಂದ 15 ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ :

ನಾವು ನೀವು ಅವರು ಇವರು
ಒಂದೆ ಒಂದೆ ಒಂದೆ.
ಭೂಮಿ ತಾಯ ಕುಡಿಗಳೆಂದು
ಪಣವ ತೊಡಿರಿ ಇಂದೆ ॥೧॥

ಸ್ವಸ್ವಭಾವ ಚಹರೆ ಬೇರೆ
ತಾಯ ಬಸಿರು ಒಂದೆ.
ಕಳಸ ಶಿಲುಬೆ ಬಿಳಿ ಮಿನಾರು
ಧರ್ಮದುಸಿರು ಒಂದೆ ॥೨॥

ಆಂಗ್ಲ ಆಫ್ರಿಕನ್ನರಲ್ಲಿ
ಹರಿವ ನೆತ್ತರೊಂದೆ.
ಅಕ್ಕಿ ರಾಗಿ ಬಿಳಿದು ಕರಿದು
ಹುಲ್ಲು ಬಣ್ಣ ಒಂದೆ ॥೩॥

ಬಾಣ ಬಿರುಸು, ಕುಂಡ, ಹಣತೆ
ಬೆಳಕ ಸತ್ವ ಒಂದೆ.
ಕಂದ ವೃತ್ತ ತ್ರಿಪದಿ ವಚನ
ರಸ ಕವಿತ್ವ ಒಂದೆ. ॥೪॥

ಕರ್ನಾಟಕ ವಂಗ ಆಂಧ್ರ
ಭಾರತೀಯರೊಂದೆ.
ಪೂರ್ವೋತ್ತರ ಪಡು ತೆಂಕಣ
ಗಾಳಿ ಮುಗಿಲು ಒಂದೆ. ॥೫॥

9. ಇಲ್ಲಿ ಕವಿ ಯಾರು ಯಾರನ್ನು 'ಒಂದು' ಎಂದು ಹೇಳಿದ್ದಾರೆ ?
(1) ನಾವು, ನೀವು, ಅವರು, ಇವರು
(2) ನಾವು, ನೀನ್ನು, ಅವರು, ಇವರು
(3) ನಾವು, ನೀವು, ಅವನ್ನು, ಇವರು
(4) ನಾವು, ನೀವು, ಅವರು, ಅವಳು

10. ಎಲ್ಲರೂ ಇಂದೇ ಏನೆಂದು ಪಣ ತೊಡಬೇಕೆಂದು ಕವಿ ಆಶಿಸಿದ್ದಾರೆ ?
(1) ಕರ್ನಾಟಕ, ವಂಗ, ಆಂಧ್ರ ಕುಡಿಗಳು
(2) ಧರ್ಮದುಸಿರ ಕುಡಿಗಳು
(3) ಆಂಗ್ಲ – ಆಫ್ರಿಕಾದ ಕುಡಿಗಳು
(4) ಭೂಮಿ ತಾಯಿಯ ಕುಡಿಗಳು



SHIKARAT.COM
Online Education
SHIKARAT.COM

11. ಈ ಪದ್ಯದ ಆಶಯಭಾವ :

I. ನಾವೆಲ್ಲ ಸೋದರರಂತೆ ಬಾಳ್ವೆ ನಡೆಸಬೇಕೆಂಬ ಏಕತ್ತಾಭಾವವನ್ನು ಈ ಕವನ ಒಳಗೊಂಡಿದೆ.

II. ಮಾನವರಾದ ನಾವೆಲ್ಲಾ ಒಂದೇ ಎಂಬ ಭಾವನೆಯನ್ನು ಈ ಕವನ ತಿಳಿಸುತ್ತದೆ.

III. ಭೂಮಿ ತಾಯಿಯ ಮಕ್ಕಳಾದ ನಾವೆಲ್ಲರೂ ಒಗ್ಗಟ್ಟಾಗಿರಬಾರದು.

ಇವುಗಳಲ್ಲಿ ಸರಿಯಾದ ಉತ್ತರ ಗುರುತಿಸಿ.

(1) I ಮಾತ್ರ ಸರಿಯಾಗಿದೆ
(2) II ಮಾತ್ರ ಸರಿಯಾಗಿದೆ
(3) I ಮತ್ತು II ಸರಿಯಾಗಿವೆ
(4) I, II ಮತ್ತು III ಸರಿಯಾಗಿವೆ

12. ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು

(1) ಬಾಣ, ಬಿರುಸು, ಕುಂಡ, ಹಣತೆ
(2) ಕಂದ, ವೃತ್ತ, ತ್ರಿಪದಿ, ವಚನ
(3) ಕಂದ, ವೃತ್ತ, ಬಾಣ, ಬಿರುಸು
(4) ಕಂದ, ವೃತ್ತ, ತ್ರಿಪದಿ, ಹಣತೆ

13. 'ತೆಂಕಣ' ಪದದ ಅರ್ಥ

(1) ಉತ್ತರ
(2) ಪೂರ್ವ
(3) ಪಶ್ಚಿಮ
(4) ದಕ್ಷಿಣ

14. ಇವುಗಳಲ್ಲಿ ತಪ್ಪಾಗಿರುವ ಹೇಳಿಕೆಯನ್ನು ಗುರುತಿಸಿ.

(1) 'ಕಂದ' ಪದ್ಯವು 4 ಸಾಲಿನ ಪದ್ಯವಾಗಿದೆ
(2) 'ವೃತ್ತಗಳು' 4 ಸಾಲಿನ ಪದ್ಯವಾಗಿರುತ್ತವೆ
(3) 'ತ್ರಿಪದಿ' 3 ಸಾಲಿನ ಪದ್ಯವಾಗಿದೆ
(4) 'ವಚನವು' 8 ಸಾಲಿನ ಪದ್ಯವಾಗಿರುತ್ತದೆ

15. 'A' ಪಟ್ಟಿಯಲ್ಲಿರುವ ಪದಗಳಿಗೆ 'B' ಪಟ್ಟಿಯಲ್ಲಿರುವ ಅರ್ಥಗಳನ್ನು ಹೊಂದಿಸಿ ಬರೆದಾಗ ಬರುವ ಸರಿಯಾದ ರೂಪ.

| **'A' ಪಟ್ಟಿ - ಪದಗಳು** | **'B' ಪಟ್ಟಿ - ಅರ್ಥಗಳು** |
|---|---|
| i. ನೆತ್ತರು | a. ಪ್ರತಿಜ್ಞೆ |
| ii. ಚಹರೆ | b. ಹೊಟ್ಟೆ |
| iii. ಪಣ | c. ದೀಪ |
| iv. ಬಸಿರು | d. ರಕ್ತ |
| | e. ಲಕ್ಷಣ |

(1) i – d, ii – e, iii – a, iv – b
(2) i – b, ii – e, iii – a, iv – d
(3) i – e, ii – d, iii – b, iv – a
(4) i – d, ii – e, iii – b, iv – c



SHIKARAT.COM

16. ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು. – ಈ ವಾಕ್ಯವು

(1) ಪ್ರಶ್ನಾರ್ಥಕ ವಾಕ್ಯ
(2) ಸಾಮಾನ್ಯ ವಾಕ್ಯ
(3) ಮಿಶ್ರ ವಾಕ್ಯ
(4) ಸಂಯೋಜಿತ ವಾಕ್ಯ

17. ಕ್ರಿಯಾ ಸಮಾಸಕ್ಕೆ ಉದಾಹರಣೆಯಾದ ಪದಗಳ ಗುಂಪು

(1) ಹಣೆಗಣ್ಣ, ಮುಕ್ಕಣ್ಣ, ಚಕ್ರಪಾಣಿ
(2) ಇಮ್ಮಾವು, ಮೆಲ್ವಾತು, ಹೊಸಗನ್ನಡ
(3) ಮೈಮುಚ್ಚು, ಕಣ್ದೆರೆ, ಕಂಗೆಡು
(4) ಆ ಕಲ್ಲು, ಈ ಬೆಕ್ಕು, ನೆಯ್ದ ವಸ್ತ್ರ

18. 'ವಿದ್ಯಾರ್ಥಿ' ಈ ಪದದಲ್ಲಿರುವ ಅಕ್ಷರ ಗಣ

(1) 'ನ' ಗಣ
(2) 'ಸ' ಗಣ
(3) 'ಮ' ಗಣ
(4) 'ತ' ಗಣ

19. 'ಸ್ಯಾನಿಟರಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ

(1) ಗ್ರೀಕ್
(2) ಪರ್ಷಿಯನ್
(3) ಹಿಂದೂಸ್ಥಾನಿ
(4) ಇಂಗ್ಲಿಷ್

20. ''ಎಳ್ಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು'' ಇದು ಈ ಅಲಂಕಾರಕ್ಕೆ ಉದಾಹರಣೆಯಾಗಿದೆ

(1) ಛೇಕಾನುಪ್ರಾಸ
(2) ಯಮಕ
(3) ವೃತ್ತ್ಯನುಪ್ರಾಸ
(4) ಉಪಮಾ

21. ಉದಾಹರಣೆಗಳ ಸಂಗ್ರಹ, ಪರಿಶೀಲನೆ, ಸಾಮಾನ್ಯ ಗುಣಲಕ್ಷಣಗಳು, ನಿಯಮ/ಸೂತ್ರವನ್ನು ರೂಪಿಸುವುದು – ಇವು ಈ ಬೋಧನಾ ಪದ್ಧತಿಯ ಅನುಕ್ರಮ ಹಂತಗಳಾಗಿವೆ

(1) ನಿಗಮನ ಪದ್ಧತಿ
(2) ಅನುಗಮನ ಪದ್ಧತಿ
(3) ಉಪನ್ಯಾಸ ಪದ್ಧತಿ
(4) ಕ್ರೀಡಾ ಪದ್ಧತಿ

22. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇವು

(1) ಧಾರ್ಮಿಕ ಮೌಲ್ಯಗಳು
(2) ಸಾಮಾಜಿಕ ಮೌಲ್ಯಗಳು
(3) ವೈಯಕ್ತಿಕ ಮೌಲ್ಯಗಳು
(4) ಪ್ರಜಾಪ್ರಭುತ್ವದ ಮೌಲ್ಯಗಳು

23. ಕನ್ನಡ ಭಾಷಾ ಶಿಕ್ಷಕರು 8ನೇ ತರಗತಿಯಲ್ಲಿ 'ತಲಕಾಡಿನ ವೈಭವ', 9ನೇ ತರಗತಿಯಲ್ಲಿ 'ಬೆಡಗಿನ ತಾಣ ಜಯಪುರ' ಹಾಗೂ 10ನೇ ತರಗತಿಯಲ್ಲಿ 'ಲಂಡನ್ ನಗರ' ಎಂಬ ಪ್ರವಾಸ ಕಥನದ ಗದ್ಯಪಾಠಗಳನ್ನು ಬೋಧಿಸುತ್ತಾರೆ. ಹಾಗಾದರೆ ಇಲ್ಲಿ ಈ ವಿಧಾನವನ್ನು ತಿಳಿಯಬಹುದಾಗಿದೆ

(1) ಅಂತರ್ಗತ ವಿಧಾನ
(2) ರಚನಾತ್ಮಕ ವಿಧಾನ
(3) ಸುರುಳಿಯಾಕಾರದ ವಿಧಾನ
(4) ನಿಗಮನ ವಿಧಾನ



SHIKARAT.COM

**24.** 2005 ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ :

I. ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.

II. ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.

ಇವುಗಳಲ್ಲಿ ಸರಿಯಾದ ಉತ್ತರ ಗುರುತಿಸಿ.

(1) I ಮಾತ್ರ ಸರಿಯಾಗಿದೆ
(2) II ಮಾತ್ರ ಸರಿಯಾಗಿದೆ
(3) I ಮತ್ತು II ಸರಿಯಾಗಿವೆ
(4) I ಮತ್ತು II ತಪ್ಪಾಗಿವೆ

**25.** ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ 'ತಾಯೆ ಬಾರ, ಮೊಗವ ತೋರ' ಪದ್ಯದ ಜೊತೆಗೆ ರಾಷ್ಟ್ರಕವಿ ಕುವೆಂಪು ಅವರ 'ಭಾರತ ಜನನಿಯ ತನುಜಾತೆ' ಪದ್ಯವನ್ನು ಪೂರಕವಾಗಿ ಶಿಕ್ಷಕರು ಬೋಧಿಸಿದರೆ ಇದು ನಮಗೆ ಈ ವಿಧಾನವನ್ನು ತಿಳಿಸುತ್ತದೆ

(1) ಸಮ್ಮಿಳಿತ ವಿಧಾನ
(2) ರಚನಾತ್ಮಕ ವಿಧಾನ
(3) ಸುರುಳಿಯಾಕಾರದ ವಿಧಾನ
(4) ಅನುಗಮನ ವಿಧಾನ

**26.** ಭಾಷೆಯೆಂದರೆ, ''ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಸಾಧನ'' ಎಂದು ಹೇಳಿದವರು

(1) ವೆಸ್ಲರ್
(2) ಸಫೀರ್
(3) ಪ್ಲೇಟೋ
(4) ದಂಡಿ

**27.** ಭಾಷಾ ಕೌಶಲಗಳನ್ನು ಬೆಳೆಸುವುದು

(1) ಸಾಹಿತ್ಯಕ ಉದ್ದೇಶ
(2) ಭಾಷಿಕ ಉದ್ದೇಶ
(3) ನೈತಿಕ ಉದ್ದೇಶ
(4) ಮಾನಸಿಕ ಉದ್ದೇಶ

**28.** ಸಾಮಾನ್ಯ ಅರ್ಥದಲ್ಲಿ 'ಆಲಿಸುವಿಕೆ' ಎಂದರೆ

(1) ಕೇಳುವಿಕೆ
(2) ಮಾತನಾಡುವಿಕೆ
(3) ಬರೆಯುವಿಕೆ
(4) ಓದುವಿಕೆ

**29.** ನಾಡು ನುಡಿಯ ಪರಂಪರೆ, ಸಾಹಿತ್ಯ ಸಂಸ್ಕೃತಿಯ ಅರಿವನ್ನು ಮೂಡಿಸುವುದು

(1) ಸಾಹಿತ್ಯಕ ಉದ್ದೇಶ
(2) ಭಾಷಿಕ ಉದ್ದೇಶ
(3) ನೈತಿಕ ಉದ್ದೇಶ
(4) ಮಾನಸಿಕ ಉದ್ದೇಶ

**30.** ಪಠ್ಯಕ್ರಮ ನಿರ್ಧರಿಸಿದ ಗುರಿಗಳನ್ನು, ಪಠ್ಯವಸ್ತು ಸೂಚಿಸಿದ ಮಾರ್ಗೋಪಾಯಗಳನ್ನು ಸಾಕಾರಗೊಳಿಸಲು ಒಂದು ನಿರ್ದಿಷ್ಟ ವಿಷಯದ ಪಠ್ಯಾಂಶಗಳನ್ನು ಒಳಗೊಂಡ ಸಾಧನ

(1) ಪಠ್ಯಪುಸ್ತಕ
(2) ಪಠ್ಯಕ್ರಮ
(3) ಪಠ್ಯವಸ್ತು
(4) ಅಭ್ಯಾಸ ಪುಸ್ತಕ



SHIKARAT.COM

PART – II
Language – II
ENGLISH

**Read the passage and answer the questions from 31 to 38 by choosing the most appropriate option :**

Ranga was never certain what he was going to do next. He set out of his little home in Kabir Lane, and by the time he turned the corner at Market Road, he always found some odd job coming his way. Today a very peculiar task offered itself as he sat near the Market Fountain. A servant from a bungalow in the extension was going round with a searching look in his eyes. He explained, "Our brass pot has fallen into the well. Do you know anyone who can get into the well and bring it out ?"

"What will they pay for it ?"

"What will you want for the job ?"

"I must see the well first, and I can't think of anything less than two rupees," he said.

"Yes, follow me," the other said, and Ranga was astounded. He never thought that his offer would be accepted. He had never gone down a well before. He tried to excuse himself now. But the other would not let him go. He almost gripped him by the wrist and dragged him along. He went protesting. "I don't know anything about wells," he cried. "Oh, don't say that, see the well first," said the servant, and clung to him. He added, "They have made life a hell for me for four days now. They will dismiss me if I don't do anything about it today."

"But I know nothing about wells."

"Hush! None of it with me," admonished the old servant, and smiled significantly. "If you want an anna or two more, ask for it, don't try these tricks."

"But, but," Ranga faltered, but the other offered him a beedi to smoke and silenced him. Ranga followed him resigned to his fate.

**31.** A peculiar task was offered to Ranga when he was sitting near the market fountain. That was

(1) Ranga set out of his little home in Kabir Lane
(2) To get into the well and bring out the brass pot
(3) A servant was going with a searching look to offer a task
(4) Ranga found some odd job coming his way

**32.** The first condition of Ranga for the job offer was

(1) He expected money first
(2) He wanted to know the address first
(3) He demanded a drop first
(4) He wanted to see the well first



SHIKARAT.COM

**33.** The money Ranga expected for his job was
(1) Not less than two rupees
(2) More than one rupee
(3) Minimum of three rupees
(4) The highest amount of five rupees

**34.** The thing which offered to silence Ranga was
(1) two rupees
(2) a beedi to smoke
(3) a brass pot
(4) a searching look

**35.** Ranga tried to excuse himself to do this job because
(1) He was not offered with a good pay
(2) He wanted to attend another job
(3) He had never gone down to a well before
(4) He was not knowing the address

**36.** He never thought that his offer would be accepted.
The correct opposite of the underlined word
(1) delayed (2) irritated (3) removed (4) rejected

**37.** Ranga wanted __________ work for ________ rupees.
Fill in the blanks with suitable homophones.
(1) too, two (2) to, two (3) two, two (4) two, to

**38.** Ranga became faltered __________ he was offered money and beedi.
Choose the suitable word.
(1) when (2) who (3) whose (4) why

**Read the poem below and answer the questions from 39 to 45 by choosing the most appropriate option.**

SHIKARAT.COM

My mother called me Blue Nile
I am also named by mother White Nile
When we grew and grew we asked
Oh mother, Oh mother
Tell us, why did you name us Nile
Our mothers said lovingly
Oh our children
You travel and travel
Cross mountains, forests and valleys
Thousands of miles, enriching nine countries
you reach Khartoum
you Blue and White Niles confluence with a mission
God has commanded you to give a message
you give a beautiful message
When we rivers confluence
Oh humanity why not your hearts confluence
And you blossom with happiness.



SHIKARAT.COM

39. What was the question the speaker asked to mother when they grew old in the initial lines ?
(1) When we rivers confluence on humanity ?
(2) Why not your hearts confluence ?
(3) You give a beautiful message.
(4) Why did you name us Nile ?

40. What was the name given to me by my mother ?
(1) Blue Nile (2) White Nile (3) Khartoum (4) Nile

41. How do rivers reach Khartoum as described in the poem ?
(1) Confluencing with a mission
(2) Giving beautiful message
(3) Crossing mountains, forests and valleys
(4) Blossoming with happiness

42. When rivers confluence, it is giving a beautiful message to humanity. That is
(1) enriching nine countries
(2) confluence your hearts and blossom with happiness
(3) to grow old
(4) to reach Khartoum

43. The Blue and White Nile travel thousands of miles carrying a
(1) heart (2) tree (3) mission (4) message

44. "God has commanded you to give a message."
The figure of speech of the sentence is
(1) Personification (2) Simile
(3) Metaphor (4) Irony

45. Read the poem and choose the correct Rhyme Scheme.
"Our mothers said lovingly
Oh our children
You travel and travel
Cross mountains, forests and valleys
(1) aabb (2) abab (3) abbc (4) abcd

**Answer the questions from 46 to 50 by choosing the most appropriate option following the given directions.**

46. Choose the correct verb form of the sentence.
The window was open and a bird ______________ into the room.
(1) fly (2) flys (3) flew (4) flown



SHIKARAT.COM

**47.** Choose the appropriate superlative degree for the given sentence.
Very few Kings were as great as Ashoka.
(1) Ashoka was the greatest King.
(2) Ashoka is the greatest King.
(3) Ashoka was one of the greatest Kings.
(4) Ashoka is one of the greatest King.

**48.** Read the given sentence and identify the suitable reported speech.
"Can I help you with your homework ?" said my mother.
(1) My mother asked me whether she would help me with my homework.
(2) My mother asked me whether she will help me with my homework.
(3) My mother asked me whether she might help me with my homework.
(4) My mother asked me whether she could help me with my homework.

**49.** Choose the correct combined sentence.
There was heavy traffic. I could not reach the office in time.
(1) Inspite of heavy traffic I could reach the office in time.
(2) Inspite of heavy traffic I did not reach the office in time.
(3) I reach the office in time despite the heavy traffic.
(4) Inspite of heavy traffic I can reach the office in time.

**50.** Identify the suitable voice of the given sentence.
Mona completed the sum.
(1) The sum is completed by Mona.
(2) The sum was completed by Mona.
(3) The sum can be completed by Mona.
(4) The sum was being completed by Mona.

**51.** NCTE stands for
(1) National Council for Teacher Education
(2) National Curriculum for Teacher Education
(3) National Committee for Teacher Education
(4) National Council for Technical Education

**52.** The second tongue of all the teacher in general and right hand of a language teacher is
(1) Chalk board
(2) A piece of chalk
(3) Red pen
(4) Time table



SHIKARAT.COM

53. The approach which emphasizes the more use of target language and there is hardly scope to use mother tongue of the pupils as the structure of English language can not be translated into mother tongue is known as
(1) Communicative approach (2) Bilingual method
(3) Structural approach (4) Spiral approach

54. Receptive vocabulary is
(1) a word we use while speaking or listening
(2) recognizing words while listening or reading
(3) knowing the meaning of the words
(4) ambiguous words

55. The change in the form of the word or words as grammatical aspects to obtain the intended meaning is known as
(1) Syntax (2) Concord (3) Semantics (4) Inflections

56. The statements that describe the knowledge, skills and attitudes which students should acquire by the end of particular class or course is known as
(1) Learning outcomes (2) Item bank
(3) Learners' outcomes (4) Learning objectives

57. A teacher divides the classroom into small groups and ask them to discuss and present their views on 'conservation of water'. The students are free to present their view in the form of written description, role play, verbal presentation etc. The teacher facilitates as and when required. This approach is known as
(1) Natural approach (2) Structural approach
(3) Deductive approach (4) Constructivist approach

58. The study of articulation, transmission and reception of speech sound is called
(1) phonetics (2) linguistics (3) syntax (4) morphology

59. The teacher first presents an object "book". The teacher holds a book in his hand and shows it to the whole class and says "book", "this is your book", "my book is red", "your book is blue", this is an example for
(1) The sentence method (2) The word method
(3) The story method (4) The phrase method

60. Assessment is made along with the teaching of lessons throughout the academic year, which includes oral tests and co-curricular activities is known as
(1) Summative Assessment (2) Formative Assessment
(3) Formal Assessment (4) Diagnostic Assessment



SHIKARAT.COM

# KANNADA MEDIUM

## PART – III

### ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

**61.** ಅನುವಂಶೀಯತೆಯ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಪ್ರಾಬಲ್ಯ ಮತ್ತು ಪ್ರತ್ಯೇಕೀಕರಣ ತತ್ವಗಳನ್ನು ನೀಡಿದವರು

(1) ಗ್ಯಾಲ್ಟನ್ (2) ಮೆಂಡಲ್ (3) ಡಾರ್ವಿನ್ (4) ಲಾಮಾರ್ಕ್

**62.** ಬಾಲ್ಯಾವಸ್ಥೆಯಲ್ಲಿ ಬೆಳವಣಿಗೆ ಮತ್ತು ವಿಕಾಸದ ದರ

(1) ಪೂರ್ವ ಬಾಲ್ಯಾವಸ್ಥೆಯಲ್ಲಿ ವೇಗವಾಗಿದ್ದು, ಉತ್ತರ ಬಾಲ್ಯಾವಸ್ಥೆಯಲ್ಲಿ ನಿಧಾನವಾಗುತ್ತದೆ

(2) ಪೂರ್ವ ಬಾಲ್ಯಾವಸ್ಥೆಯಲ್ಲಿ ನಿಧಾನವಾಗಿದ್ದು, ಉತ್ತರ ಬಾಲ್ಯಾವಸ್ಥೆಯಲ್ಲಿ ವೇಗವಾಗುತ್ತದೆ

(3) ಪೂರ್ವ ಮತ್ತು ಉತ್ತರ ಬಾಲ್ಯಾವಸ್ಥೆ ಎರಡರಲ್ಲೂ ಸಮನಾಗಿರುತ್ತದೆ

(4) ಪೂರ್ವ ಮತ್ತು ಉತ್ತರ ಬಾಲ್ಯಾವಸ್ಥೆ ಎರಡರಲ್ಲೂ ನಿಧಾನವಾಗಿರುತ್ತದೆ

**63.** ವಿಕಾಸಾತ್ಮಕ ಕಾರ್ಯಗಳಲ್ಲಿ ಸೂಕ್ತ ಲಿಂಗ ಪಾತ್ರಗಳ ಕಲಿಕೆಯ ಹಂತ

(1) ಪೂರ್ವ ಬಾಲ್ಯಾವಸ್ಥೆ (2) ಉತ್ತರ ಬಾಲ್ಯಾವಸ್ಥೆ

(3) ಪೂರ್ವ ತಾರುಣ್ಯಾವಸ್ಥೆ (4) ಉತ್ತರ ತಾರುಣ್ಯಾವಸ್ಥೆ

**64.** ಈ ಕೆಳಗಿನವುಗಳಲ್ಲಿ ಯಾವುದು ಜ್ಞಾನಾತ್ಮಕ ಬೆಳವಣಿಗೆಯ ಅಂಶವಲ್ಲ ?

(1) ಸಂವೇದನೆ ಮತ್ತು ಗ್ರಹಿಕೆ (2) ಪರಿಕಲ್ಪನಾ ಬೆಳವಣಿಗೆ

(3) ಭಾಷಾ ಬೆಳವಣಿಗೆ (4) ದೇಹದಾರ್ಢ್ಯತೆಯ ಪ್ರಮಾಣದಲ್ಲಿ ಬದಲಾವಣೆ

**65.** ಜೀವನದ ಯಶಸ್ಸಿಗೆ ಪೂರಕವಾಗಿ ಬುದ್ಧಿಶಕ್ತಿ ಸೂಚ್ಯಂಕ (IQ) ಮತ್ತು ಭಾವನಾತ್ಮಕ ಸೂಚ್ಯಂಕ (EQ) ಗಳಿಗಿರುವ ಸಂಬಂಧ

(1) ಭಾವನಾತ್ಮಕ ಸೂಚ್ಯಂಕ (EQ)ವು ಬುದ್ಧಿಶಕ್ತಿ ಸೂಚ್ಯಂಕ (IQ) ಕ್ಕಿಂತ ಮಹತ್ವವಾದುದು

(2) ಬುದ್ಧಿಶಕ್ತಿ ಸೂಚ್ಯಂಕ (IQ)ವು ಭಾವನಾತ್ಮಕ ಸೂಚ್ಯಂಕ (EQ) ಕ್ಕಿಂತ ಮಹತ್ವವಾದುದು

(3) ಭಾವನಾತ್ಮಕ ಸೂಚ್ಯಂಕ (EQ) ಮತ್ತು ಬುದ್ಧಿಶಕ್ತಿ ಸೂಚ್ಯಂಕ (IQ) ದಲ್ಲಿ ಯಾವುದೇ ರೀತಿಯ ಪರಿಣಾಮವಿಲ್ಲ

(4) ಭಾವನಾತ್ಮಕ ಸೂಚ್ಯಂಕ (EQ) ಮತ್ತು ಬುದ್ಧಿಶಕ್ತಿ ಸೂಚ್ಯಂಕ (IQ) ಸಮಾನವಾಗಿ ಪ್ರಭಾವ ಬೀರುತ್ತವೆ

**66.** ಥಾರ್ನ್‌ಡೈಕ್‌ರವರ ಕಲಿಕೆಯ ನಿಯಮಗಳಲ್ಲಿ ಉಪಯೋಗ ಮತ್ತು ಅನುಪಯೋಗ ನಿಯಮ ಸಂಬಂಧಿಸಿರುವುದು

(1) ಸಿದ್ಧತಾ ನಿಯಮ (2) ಅಭ್ಯಾಸ ನಿಯಮ

(3) ಪರಿಣಾಮ ನಿಯಮ (4) ಸಂಯೋಜನೆಯ ನಿಯಮ

**67.** ಕ್ರಮಾನುಗತ ಬೋಧನೆಯು ಇದರ ಕೊಡುಗೆಯಾಗಿದೆ

(1) ಸಾಂಪ್ರದಾಯಿಕ ಅನುಬಂಧನ ಕಲಿಕೆ (2) ಕ್ರಿಯಾಜನ್ಯ ಅನುಬಂಧನ ಕಲಿಕೆ

(3) ಒಳನೋಟ ಕಲಿಕೆ (4) ಸಾಮಾಜಿಕ ಕಲಿಕೆ



SHIKARAT.COM

68. ಪಾವ್‌ಲೋವ್‌ರವರ ಸಾಂಪ್ರದಾಯಿಕ ಅನುಬಂಧನ ಕಲಿಕೆ ಸಿದ್ಧಾಂತದಲ್ಲಿ 'ಗಂಟೆಯ ಶಬ್ದವು'

(1) ಸಹಜ ಉದ್ದೀಪನ
(2) ಅನುಬಂಧಿತ ಉದ್ದೀಪನ
(3) ಸಹಜ ಅನುಕ್ರಿಯೆ
(4) ಅನುಬಂಧಿತ ಅನುಕ್ರಿಯೆ

69. ಗಿಲ್‌ಫರ್ಡ್‌ರವರ ಬುದ್ಧಿಶಕ್ತಿ ಮಾದರಿಯ ಮೂರು ಪ್ರಮುಖ ಆಯಾಮಗಳ ಸರಿಯಾದ ಕ್ರಮ

(1) ವಿಷಯ ವಸ್ತುಗಳು, ಕ್ರಿಯೆಗಳು, ಉತ್ಪನ್ನಗಳು
(2) ಉತ್ಪನ್ನಗಳು, ಕ್ರಿಯೆಗಳು, ವಿಷಯ ವಸ್ತುಗಳು
(3) ಕ್ರಿಯೆಗಳು, ವಿಷಯ ವಸ್ತುಗಳು, ಉತ್ಪನ್ನಗಳು
(4) ಕ್ರಿಯೆಗಳು, ಉತ್ಪನ್ನಗಳು, ವಿಷಯ ವಸ್ತುಗಳು

70. 'ರೇವನ್ಸ್ ಪ್ರೊಗ್ರೆಸಿವ್ ಮ್ಯಾಟ್ರಿಸಿಸ್' ಪರೀಕ್ಷೆಯು

(1) ವ್ಯಕ್ತಿತ್ವ ಪರೀಕ್ಷೆ
(2) ಸೃಜನಾತ್ಮಕ ಪರೀಕ್ಷೆ
(3) ಮನೋಧೋರಣೆ ಪರೀಕ್ಷೆ
(4) ಬುದ್ಧಿಶಕ್ತಿ ಪರೀಕ್ಷೆ

71. ಸಿಗ್ಮಂಡ್ ಫ್ರಾಯ್ಡ್‌ರವರು ಅಭಿವೃದ್ಧಿಪಡಿಸಿದ ವ್ಯಕ್ತಿತ್ವದ ಸಿದ್ಧಾಂತ

(1) ವೈಯಕ್ತಿಕ ಮನೋವಿಜ್ಞಾನ ಸಿದ್ಧಾಂತ
(2) ವಿಶ್ಲೇಷಣಾತ್ಮಕ ಮನೋವಿಜ್ಞಾನ ಸಿದ್ಧಾಂತ
(3) ಮನೋವಿಶ್ಲೇಷಣಾತ್ಮಕ ಸಿದ್ಧಾಂತ
(4) ಅಭಿಪ್ರೇರಣಾ ಸಿದ್ಧಾಂತ

72. ರಾಬರ್ಟ್ ಎಮ್. ಗ್ಯಾಗ್ನೆಯವರ ಕಲಿಕೆಯ ವರ್ಗೀಕರಣದಲ್ಲಿ ಎಂಟನೆಯ ಕಲಿಕೆ

(1) ಪರಿಕಲ್ಪನಾ ಕಲಿಕೆ
(2) ಶಾಬ್ದಿಕ ಸಹಚರ್ಯ ಕಲಿಕೆ
(3) ಉದ್ದೀಪನಾ ಅನುಕ್ರಿಯೆ ಕಲಿಕೆ
(4) ಸಮಸ್ಯಾ ಪರಿಹಾರ ಕಲಿಕೆ

73. 'ವೇಗವರ್ಧನೆ' ಶೈಕ್ಷಣಿಕ ಅವಕಾಶಗಳು ಈ ಮಕ್ಕಳಿಗೆ ಸಂಬಂಧಿಸಿದೆ

(1) ಪ್ರತಿಭಾವಂತ ಮಕ್ಕಳು
(2) ಸೃಜನಶೀಲ ಮಕ್ಕಳು
(3) ಕಲಿಕೆಯಲ್ಲಿ ಹಿಂದುಳಿದ ಮಕ್ಕಳು
(4) ಸಾಮಾನ್ಯ ಮಕ್ಕಳು

74. 'ಗಣಿತಶಾಸ್ತ್ರದಲ್ಲಿ ಪಡೆದ ಜ್ಞಾನವು ಭೌತಶಾಸ್ತ್ರದಲ್ಲಿನ ಸಮಸ್ಯೆಗಳನ್ನು ಬಿಡಿಸಲು ಸಹಾಯಕವಾಗುವುದು' – ಈ ಉದಾಹರಣೆಗೆ ಸೂಕ್ತವಾದ ಕಲಿಕಾ ವರ್ಗಾವಣೆ

(1) ಋಣಾತ್ಮಕ ವರ್ಗಾವಣೆ
(2) ಧನಾತ್ಮಕ ವರ್ಗಾವಣೆ
(3) ಶೂನ್ಯ ವರ್ಗಾವಣೆ
(4) ಪಾರ್ಶ್ವ ವರ್ಗಾವಣೆ

75. ಅಕ್ಷರ ರಚನೆಯಲ್ಲಿ ವ್ಯತ್ಯಾಸ, ಅಸಮಂಜಸ ಅಂತರ ಮತ್ತು ಅನಿಯಮಿತ ಜೋಡಣೆಯು ಈ ಕೆಳಗಿನ ಯಾವ ಕಲಿಕಾ ನ್ಯೂನ್ಯತೆಯ ಲಕ್ಷಣ ?

(1) ಡಿಸ್‌ಲೆಕ್ಸಿಯಾ
(2) ಡಿಸ್‌ಕ್ಯಾಲ್ಕುಲಿಯಾ
(3) ಡಿಸ್‌ಗ್ರಾಫಿಯಾ
(4) ಡಿಸ್‌ಪ್ರಾಕ್ಸಿಯಾ

76. ಕೌಶಲ್ಯವು ತನ್ನ ಅತ್ಯುನ್ನತ ಮಟ್ಟದ ಪ್ರಾವೀಣ್ಯತೆಯನ್ನು ಸಾಧಿಸಿ, ಒಂದು ಕಾರ್ಯವನ್ನು ಸ್ವಯಂಚಾಲಿತವಾಗಿ ಮತ್ತು ನಿರಾತಂಕವಾಗಿ ನಿರ್ವಹಿಸುವ ಮನೋಜನ್ಯವಲಯದ ಹಂತ

(1) ಅನುಕರಣೆ (2) ನಿಖರತೆ (3) ಸ್ವಾಭಾವೀಕರಣ (4) ಕೈಚಳಕ



SHIKARAT.COM

77. ಬ್ಲೂಮನ ಮನೋಜನ್ಯವಲಯವು ಈ ಕೆಳಗಿನ ಯಾವ ಸಾಮರ್ಥ್ಯವನ್ನು ಒಳಗೊಂಡಿದೆ ?
(1) ಬೌದ್ಧಿಕ ಸಾಮರ್ಥ್ಯಗಳು
(2) ದೈಹಿಕ ಮತ್ತು ಕೈಚಳಕದ ಕೌಶಲ್ಯಗಳು
(3) ಮನೋಧೋರಣೆ, ಮೌಲ್ಯ ಮತ್ತು ಆಸಕ್ತಿಗಳು
(4) ಸೃಜನಾತ್ಮಕ ಸಾಮರ್ಥ್ಯಗಳು

78. ವಿದ್ಯಾರ್ಥಿಯ ಜ್ಞಾನ, ತಿಳುವಳಿಕೆ, ಅನ್ವಯ, ಕೌಶಲ್ಯ, ಮುಂತಾದ ಕ್ಷೇತ್ರಗಳಲ್ಲಿ ಉಂಟಾಗುವ ಬದಲಾವಣೆಯನ್ನು ಅಳೆಯುವ ಪರೀಕ್ಷೆ
(1) ಸಾಧನಾ ಪರೀಕ್ಷೆ
(2) ನೈದಾನಿಕ ಪರೀಕ್ಷೆ
(3) ಪೂರ್ವಸೂಚಕ ಪರೀಕ್ಷೆ
(4) ಕಾರ್ಯನಿರ್ವಹಣಾ ಪರೀಕ್ಷೆ

79. ಈ ಕೆಳಗಿನವುಗಳಲ್ಲಿ ಅನ್ವಯಕ್ಕೆ ಸಂಬಂಧಪಟ್ಟ ವರ್ತನಾ ಫಲವನ್ನು ಒಳಗೊಂಡಿರುವ ವಾಕ್ಯ
(1) ವಿದ್ಯಾರ್ಥಿ ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸುವನು
(2) ವಿದ್ಯಾರ್ಥಿ ಚುನಾವಣೆಯ ಅರ್ಥವನ್ನು ಸ್ಮರಿಸುವನು
(3) ವಿದ್ಯಾರ್ಥಿ ಹೂವಿನ ಚಿತ್ರವನ್ನು ಬಿಡಿಸುವನು
(4) ವಿದ್ಯಾರ್ಥಿ ಲೋಹಗಳು ಉತ್ತಮ ವಿದ್ಯುತ್ ವಾಹಕಗಳು ಎಂಬ ಸಾಮಾನ್ಯೀಕರಣಕ್ಕೆ ಬರುವನು

80. ಸಾಮಾನ್ಯ ಮಕ್ಕಳ ಬುದ್ಧಿಶಕ್ತಿ ಸೂಚ್ಯಂಕ (IQ) ದ ವ್ಯಾಪ್ತಿ
(1) 80 ರಿಂದ 90 ರ ನಡುವೆ
(2) 120 ರಿಂದ 130 ರ ನಡುವೆ
(3) 70 ರಿಂದ 80 ರ ನಡುವೆ
(4) 90 ರಿಂದ 110 ರ ನಡುವೆ

81. ಒಳನೋಟ ಕಲಿಕೆಯು ಯಾವ ಬೋಧನಾ ಸೂತ್ರಕ್ಕೆ ಉತ್ತಮ ಉದಾಹರಣೆ ?
(1) ಇಡಿಯಿಂದ ಬಿಡಿಯ ಕಡೆಗೆ
(2) ಸರಳದಿಂದ ಸಂಕೀರ್ಣದೆಡೆಗೆ
(3) ಸುಲಭದಿಂದ ಕಠಿಣದೆಡೆಗೆ
(4) ಮೂರ್ತದಿಂದ ಅಮೂರ್ತದೆಡೆಗೆ

82. ಪಾಠ ಯೋಜನೆಯು
(1) ಬೋಧನೆಯ ಕ್ರಿಯಾ ಪೂರ್ವ ಹಂತ
(2) ಬೋಧನೆಯ ಅಂತರ್‌ಕ್ರಿಯಾ ಹಂತ
(3) ಬೋಧನೆಯ ಕ್ರಿಯಾ ನಂತರದ ಹಂತ
(4) ಬೋಧನೆಯ ವರ್ಗೀಕರಣದ ಹಂತ

83. ಪುನರ್ಬಲನ ಕೌಶಲ್ಯದಲ್ಲಿ 'ಚಪ್ಪಾಳೆ ಹೊಡೆಯುವುದು' ಈ ಕೆಳಗಿನ ಯಾವ ಪುನರ್ಬಲನದ ಉದಾಹರಣೆ ?
(1) ಧನಾತ್ಮಕ ಶಾಬ್ದಿಕ ಪುನರ್ಬಲನ
(2) ಋಣಾತ್ಮಕ ಶಾಬ್ದಿಕ ಪುನರ್ಬಲನ
(3) ಧನಾತ್ಮಕ ಅಶಾಬ್ದಿಕ ಪುನರ್ಬಲನ
(4) ಋಣಾತ್ಮಕ ಅಶಾಬ್ದಿಕ ಪುನರ್ಬಲನ

84. 'ಪುನರ್‌ಕೇಂದ್ರೀಕರಣ' ಮತ್ತು 'ಪುನರ್‌ನಿರ್ದೇಶನ' ಈ ಕೆಳಗಿನ ಯಾವ ಕೌಶಲ್ಯದ ಘಟಕಾಂಶಗಳು ?
(1) ಪಾಠ ಪೀಠಿಕಾ ಕೌಶಲ್ಯ
(2) ಶೋಧನಾತ್ಮಕ ಪ್ರಶ್ನೆಗಳನ್ನು ಕೇಳುವ ಕೌಶಲ್ಯ
(3) ವಿವರಣಾ ಕೌಶಲ್ಯ
(4) ಉದ್ದೀಪನಾ ಬದಲಾವಣೆಯ ಕೌಶಲ್ಯ



SHIKARAT.COM

85. ವ್ಯಕ್ತಿಯ ಬಾಹ್ಯ ವರ್ತನೆಯನ್ನು ಅಳೆಯಲು ಉಪಯೋಗಿಸುವ ಮೌಲ್ಯಮಾಪನ ತಂತ್ರ

(1) ಸಂದರ್ಶನ ತಂತ್ರ
(2) ಸಮಾಜಮಿತಿ ತಂತ್ರ
(3) ವೀಕ್ಷಣಾ ತಂತ್ರ
(4) ಪ್ರಕ್ಷೇಪಣಾ ತಂತ್ರ


86. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ವಿಕಸನದಲ್ಲಿ ಅನುವಂಶೀಯತೆ ಮತ್ತು ಪರಿಸರಕ್ಕೆ ಇರುವ ಸಂಬಂಧವನ್ನು ತೋರಿಸುವ ಸಮೀಕರಣ

(1) ಅನುವಂಶೀಯತೆ + ಪರಿಸರ
(2) ಅನುವಂಶೀಯತೆ – ಪರಿಸರ
(3) ಅನುವಂಶೀಯತೆ ÷ ಪರಿಸರ
(4) ಅನುವಂಶೀಯತೆ × ಪರಿಸರ

87. ಒಬ್ಬ ವಿದ್ಯಾರ್ಥಿಯ ಸಾಧನೆಯನ್ನು ಅದೇ ತರಗತಿಯ ಇತರೆ ವಿದ್ಯಾರ್ಥಿಗಳ ಗುಂಪಿಗೆ ಹೋಲಿಸಿ ಅವನ ಸಾಮರ್ಥ್ಯವನ್ನು ನಿರ್ಧರಿಸುವ ಪರೀಕ್ಷೆ

(1) ಮಾನದಂಡ ಆಧಾರಿತ ಪರೀಕ್ಷೆ
(2) ನೈದಾನಿಕ ಪರೀಕ್ಷೆ
(3) ಪೂರ್ವಸೂಚಕ ಪರೀಕ್ಷೆ
(4) ಪ್ರಮಾಣಕ ಆಧಾರಿತ ಪರೀಕ್ಷೆ

88. ವೈಗೋಟ್ಸ್ಕಿರವರ ಪ್ರಕಾರ, ಈ ಕೆಳಗಿನ ಚಿತ್ರದಲ್ಲಿ ಯಾವ ಅಕ್ಷರವು 'ಸಮೀಪದ ಅಭಿವೃದ್ಧಿ ವಲಯ'ವನ್ನು ಪ್ರತಿನಿಧಿಸುತ್ತದೆ ?




(1) A
(2) B
(3) C
(4) D

89. ವಿದ್ಯಾರ್ಥಿಗಳು, ಶಿಕ್ಷಕರು ನೀಡಿದ ಸಮಸ್ಯೆಯನ್ನು ಪರಿಹರಿಸುತ್ತಿದ್ದಾರೆ. ಹಾಗಾದರೆ ಅವರು ಪಿಯಾಜೆಯವರ ಜ್ಞಾನಾತ್ಮಕ ವಿಕಾಸದ ಈ ಕೆಳಗಿನ ಯಾವ ಹಂತಕ್ಕೆ ಸೇರಿದ್ದಾರೆ ?

(1) ಸಂವೇದನಾ ಗತಿ ಹಂತ
(2) ಕಾರ್ಯಪೂರ್ವ ಹಂತ
(3) ಮೂರ್ತ ಕಾರ್ಯಗಳ ಹಂತ
(4) ಔಪಚಾರಿಕ ಕಾರ್ಯಗಳ ಹಂತ

90. ಬೆಳವಣಿಗೆ ಮತ್ತು ವಿಕಾಸಕ್ಕೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಗಳು

a. ಬೆಳವಣಿಗೆಯು ವಿಕಾಸದ ಒಂದು ಭಾಗ.
b. ವಿಕಾಸವು ಬೆಳವಣಿಗೆಯ ಭಾಗ.
c. ಬೆಳವಣಿಗೆ ನಿರಂತರವಾದುದು ಆದರೆ ವಿಕಾಸ ನಿರಂತರವಾದುದಲ್ಲ.
d. ಬೆಳವಣಿಗೆ ನಿರಂತರವಾದುದಲ್ಲ ಆದರೆ ವಿಕಾಸ ನಿರಂತರವಾದುದು.

(1) a ಮತ್ತು b
(2) a ಮತ್ತು c
(3) b ಮತ್ತು c
(4) c ಮತ್ತು d



SHIKARAT.COM

## KANNADA MEDIUM
## PART – IV
### ಸಮಾಜ ವಿಜ್ಞಾನ

**91.** ಕರ್ನಾಟಕದಲ್ಲಿ ಕಂಡು ಬಂದಿರುವ ಪ್ರಥಮ ಸಂಸ್ಕೃತ ಶಾಸನ

(1) ಬಾದಾಮಿ ಶಾಸನ

(2) ಮಳವಳ್ಳಿ ಶಾಸನ

(3) ತಾಳಗುಂದ ಶಾಸನ

(4) ಚಂದ್ರವಳ್ಳಿ ಶಾಸನ

**92.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | ಪಟ್ಟಿ – II |
|---|---|
| **a.** ಗಡಿನಾಡ ಗಾಂಧಿ | i. ಜಯಪ್ರಕಾಶ್ ನಾರಾಯಣ್ |
| **b.** ಲೋಕನಾಯಕ | ii. ಲಾಲಾ ಲಜಪತ ರಾಯ್ |
| **c.** ದೇಶಬಂಧು | iii. ಖಾನ್ ಅಬ್ದುಲ್ ಗಫಾರ್ ಖಾನ್ |
| **d.** ಪಂಜಾಬಿನ ಸಿಂಹ | iv. ಚಿತ್ತರಂಜನ್ ದಾಸ್ |

| | **a** | **b** | **c** | **d** |
|---|---|---|---|---|
| (1) | iii | i | iv | ii |
| (2) | iii | i | ii | iv |
| (3) | iii | ii | iv | i |
| (4) | iii | iv | ii | i |

**93.** ಕೆಳಗಿನ ಘಟನೆಗಳ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

**a.** ದೇಶೀಯ ಪತ್ರಿಕೆಗಳ ನಿಯಂತ್ರಣ ಕಾಯ್ದೆ

**b.** ಬಂಗಾಳದ ವಿಭಜನೆ

**c.** ಭಾರತ ಒಕ್ಕೂಟದೊಂದಿಗೆ ಜುನಾಗಡ್ ಸೇರ್ಪಡೆ

**d.** ಸ್ವರಾಜ್ ಪಕ್ಷದ ಸ್ಥಾಪನೆ

| | | | | |
|---|---|---|---|---|
| (1) | b | c | a | d |
| (2) | b | c | d | a |
| (3) | a | b | c | d |
| (4) | a | b | d | c |



SHIKARAT.COM

**94.** ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಅವುಗಳಿಗೆ ಸಂಬಂಧಿಸಿದ ಸರಿಯಾದ ಆಯ್ಕೆಯನ್ನು ಆರಿಸಿ.

**a.** ಭೂಕಂದಾಯ ವಸೂಲಿಯನ್ನು ನೋಡಿಕೊಳ್ಳಲು ''ಕಡಿತವರ್ಗಡೆ'' ಎಂಬ ಅಧಿಕಾರಿಯನ್ನು ನೇಮಿಸಿದ್ದರು.

**b.** ಅವರು ಲಕ್ಕುಂಡಿ ಹಾಗೂ ಸೂಡಿಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿದ್ದರು.

ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

(1) ರಾಷ್ಟ್ರಕೂಟರು
(2) ಕಲ್ಯಾಣದ ಚಾಲುಕ್ಯರು
(3) ಹೊಯ್ಸಳರು
(4) ಗಂಗರು

**95.** ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**a.** ಗೌತಮ ಬುದ್ಧನ ಮೊಟ್ಟಮೊದಲ ಬೋಧನೆಯು 'ಧರ್ಮ ಚಕ್ರ ಪ್ರವರ್ತನ' ಎಂದು ಕರೆಯಲ್ಪಟ್ಟಿದೆ.

**b.** ಗೌತಮ ಬುದ್ಧನು ಪಂಚ ಪ್ರತಿಜ್ಞೆಗಳನ್ನು ಬೋಧಿಸಿದನು.

**c.** ವರ್ಧಮಾನ ಮಹಾವೀರನು ಅಷ್ಟಾಂಗಿಕ ಮಾರ್ಗವನ್ನು ಬೋಧಿಸಿದನು.

**d.** ವರ್ಧಮಾನ ಮಹಾವೀರನು ಗುಜರಾತಿನ ಪಾವಾಪುರಿ ಎಂಬಲ್ಲಿ ನಿರ್ವಾಣವನ್ನು ಹೊಂದಿದನು.

(1) a ಮತ್ತು b ಸರಿ
(2) a ಸರಿ
(3) a, b ಮತ್ತು c ಸರಿ
(4) a, b, c ಮತ್ತು d ಸರಿ

**96.** ಮೊದಲೆರಡು ಪದಗಳ ನಡುವಿನ ಸಂಬಂಧವನ್ನು ಗುರುತಿಸಿ ಮತ್ತು ಮೂರನೇ ಪದಕ್ಕೆ ಉತ್ತರವನ್ನು ಆರಿಸಿ.

ಸಹನಾ-ಇ-ಮಂಡಿ : ಅಲ್ಲಾವುದ್ದೀನ್ ಖಿಲ್ಜಿ : : ನಲವತ್ತು ಸರದಾರರ ಕೂಟದ ನೇಮಕ : ____________

(1) ಇಲ್ತುಮಿಶ್
(2) ಘಿಯಾಸುದ್ದೀನ್ ಬಲ್ಬನ್
(3) ಮಹಮ್ಮದ್ ಬಿನ್ ತುಘಲಕ್
(4) ಕುತುಬುದ್ದೀನ್ ಐಬಕ್

**97.** ಕೊಟ್ಟಿರುವ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**ಪ್ರತಿಪಾದನೆ (A)** : ಶೇರ್‌ಷಾನ ಮೂಲ ಹೆಸರು ಘಿಯಾಸುದ್ದೀನ್.

**ಸಮರ್ಥನೆ (R)** : ಶೇರ್‌ಷಾನು ಬಹಾರ್ ಖಾನ್ ಲೋಹಣಿಯ ಸೇವೆಯಲ್ಲಿದ್ದಾಗ ಒಬ್ಬನೇ ಹುಲಿಯನ್ನು ಕೊಂದು ಶೇರ್‌ಖಾನ್ ಎಂಬ ಬಿರುದನ್ನು ಪಡೆದನು.

(1). (A) ಮತ್ತು (R) ಗಳೆರಡೂ ಸರಿ ಮತ್ತು (A) ಗೆ (R) ಸರಿಯಾದ ಸಮರ್ಥನೆಯಾಗಿದೆ
(2) (A) ಮತ್ತು (R) ಗಳೆರಡೂ ಸರಿ ಆದರೆ (A) ಗೆ (R) ಸರಿಯಾದ ಸಮರ್ಥನೆಯಲ್ಲ
(3) (A) ಸರಿ ಮತ್ತು (R) ತಪ್ಪು
(4) (A) ತಪ್ಪು ಮತ್ತು (R) ಸರಿ



SHIKARAT.COM

98. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | ಪಟ್ಟಿ – II |
|---|---|
| a. ಹಿಂದೂಸ್ತಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ | i. ಎಡ್ಮಂಡ್ ಬರ್ಕ್ |
| b. ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು | ii. ಲಾರ್ಡ್ ಕಾರ್ನ್‌ವಾಲೀಸ್ |
| c. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವು ಅಪರಾಧ ತೆರಿಗೆ | iii. ಜವಾಹರಲಾಲ್ ನೆಹರೂ |
| d. ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿಯೇ ಹೋರಾಡುತ್ತದೆಯೇ ಹೊರತು ಸಮಾಜವಾದಕ್ಕಲ್ಲ | iv. ಚಾರ್ಲ್ಸ್ ಮೆಟ್ಕಾಫ್ |

| | a | b | c | d |
|---|---|---|---|---|
| (1) | i | iv | ii | iii |
| (2) | ii | i | iv | iii |
| (3) | ii | i | iii | iv |
| (4) | ii | iv | i | iii |

99. 'ಸೋಷಿಯಲ್ ಕಾಂಟ್ರಾಕ್ಟ್' ಎಂಬ ಗ್ರಂಥವನ್ನು ರಚಿಸಿದವರು

(1) ರೂಸೋ
(2) ವಾಲ್ಟೇರ್
(3) ಮಾಂಟೆಸ್ಕ್ಯೂ
(4) ಅರಿಸ್ಟಾಟಲ್

100. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.

(1) 1617ರಲ್ಲಿ ಸರ್ ಥಾಮಸ್ ರೋ ಜಹಾಂಗೀರನ ಆಸ್ಥಾನಕ್ಕೆ ಭೇಟಿ ನೀಡಿದನು.

(2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಪ್ರಪ್ರಥಮ ಫ್ಯಾಕ್ಟರಿಯನ್ನು 1668ರಲ್ಲಿ ಮಚಲಿಪಟ್ಟಣದಲ್ಲಿ ಆರಂಭಿಸಿತು.

(3) ಮೊದಲ ಕಾರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿದ 'ಎಕ್ಸ್-ಲಾ-ಚಾಪೆಲ್' ಒಪ್ಪಂದವು ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ನಡೆಯಿತು.

(4) ಎರಡನೇ ಷಾ ಆಲಂ ಬಂಗಾಳದ ಮೇಲಿನ 'ದಿವಾನಿ ಹಕ್ಕನ್ನು' ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ನೀಡಿದನು.



SHIKARAT.COM

**101.** ಕೆಳಗಿನ ಹೇಳಿಕೆಗಳನ್ನು ಓದಿರಿ.

**a.** ಇವರು ಬೆಂಗಳೂರನ್ನು ಮೊಘಲರ ಸೇನಾನಿಯಿಂದ ಕೊಂಡು ಕೊಂಡರು.

**b.** ಕರ್ನಾಟಕ ಕವಿ ಚಕ್ರವರ್ತಿ, ನವಕೋಟಿ ನಾರಾಯಣ ಎಂಬ ಬಿರುದುಗಳನ್ನು ಹೊಂದಿದ್ದರು.

**c.** ಅಂಚೆ ವ್ಯವಸ್ಥೆಯು ಇವರ ಕಾಲದಲ್ಲಿ ಜಾರಿಯಾಯಿತು.

ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

(1) ರಾಜ ಒಡೆಯರು
(2) ಮುಮ್ಮಡಿ ಕೃಷ್ಣರಾಜ ಒಡೆಯರು
(3) ನಾಲ್ವಡಿ ಕೃಷ್ಣರಾಜ ಒಡೆಯರು
(4) ಚಿಕ್ಕದೇವರಾಜ ಒಡೆಯರು

**102.** ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**ಹೇಳಿಕೆ (A)** : ಫಜಲ್ ಅಲಿಯವರು ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರಾಗಿದ್ದರು ಹಾಗೂ ಕೆ. ಎಂ. ಪಣಿಕ್ಕರ್ ಮತ್ತು ಹೆಚ್. ಎನ್. ಕುಂಜ್ರು ಈ ಆಯೋಗದ ಸದಸ್ಯರಾಗಿದ್ದರು.

**ಹೇಳಿಕೆ (B)** : ರಾಜ್ಯ ಪುನರ್ವಿಂಗಡಣಾ ಕಾಯಿದೆ 1955ರಲ್ಲಿ ಜಾರಿಗೆ ಬಂದಿತು.

(1) ಹೇಳಿಕೆ (A) ಸರಿ, (B) ತಪ್ಪು
(2) ಹೇಳಿಕೆ (A) ತಪ್ಪು, (B) ಸರಿ
(3) ಹೇಳಿಕೆ (A) ಮತ್ತು (B) ಎರಡೂ ಸರಿ
(4) ಹೇಳಿಕೆ (A) ಮತ್ತು (B) ಎರಡೂ ತಪ್ಪು

**103.** ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**a.** ಭಾರತ ಸರ್ಕಾರವು ಭಾರತದ ರಾಷ್ಟ್ರ ಲಾಂಛನವನ್ನು 26 ಜನವರಿ 1950 ರಂದು ಅಂಗೀಕರಿಸಿತು.

**b.** ಭಾರತದ ರಾಷ್ಟ್ರಗೀತೆಯಾಗಿರುವ ಜನ ಗಣ ಮನವನ್ನು ರಬೀಂದ್ರನಾಥ ಠಾಗೋರರು 1911 ರಲ್ಲಿ ಹಿಂದಿ ಭಾಷೆಯಲ್ಲಿ ರಚಿಸಿದರು.

**c.** ಭಾರತ ಸರ್ಕಾರವು ರಾಷ್ಟ್ರೀಯ ಪಂಚಾಂಗವನ್ನು 1957 ರ ಮಾರ್ಚ್ 22 ರಂದು ಆಚರಣೆಗೆ ತಂದಿತು.

**d.** 'ಆನಂದ ಮಠ' ಕಾದಂಬರಿಯನ್ನು ರಚಿಸಿದವರು ಬಂಕಿಮಚಂದ್ರ ಚಟರ್ಜಿ.

(1) a, b ಮತ್ತು c ಸರಿ
(2) a, c ಮತ್ತು d ಸರಿ
(3) b, c ಮತ್ತು d ಸರಿ
(4) a, b ಮತ್ತು d ಸರಿ

**104.** ಪ್ರತಿ ವರ್ಷ ವಿಶ್ವ ಸಂಸ್ಥೆಯ ದಿನವನ್ನು ಆಚರಿಸುವುದು

(1) ಅಕ್ಟೋಬರ್ 24 ರಂದು
(2) ಅಕ್ಟೋಬರ್ 25 ರಂದು
(3) ಅಕ್ಟೋಬರ್ 26 ರಂದು
(4) ಅಕ್ಟೋಬರ್ 27 ರಂದು



SHIKARAT.COM

**105.** ಕೆಳಗೆ ನೀಡಿರುವ ಎಲ್ಲಾ ಹೇಳಿಕೆಗಳನ್ನು ಓದಿರಿ.

**a.** ಕನಿಷ್ಠ ಕೂಲಿ ಕಾಯಿದೆಯು 1948ರಲ್ಲಿ ಜಾರಿಗೆ ಬಂದಿತು.

**b.** 86ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಮೂಲಕ 11ನೇ ಮೂಲಭೂತ ಕರ್ತವ್ಯವನ್ನು ಸೇರಿಸಲಾಯಿತು.

**c.** 1947ರ ಡಿಸೆಂಬರ್ 13 ರಂದು 'ಧ್ಯೇಯಗಳ ನಿರ್ಣಯ'ವನ್ನು ಮಂಡಿಸಲಾಯಿತು.

**d.** ಭಾರತ ಸಂವಿಧಾನದ 352 ನೇ ವಿಧಿಯು ರಾಜ್ಯ ತುರ್ತುಪರಿಸ್ಥಿತಿಗೆ ಸಂಬಂಧಿಸಿದೆ.

ಈ ಮೇಲಿನ ಎಲ್ಲಾ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾದ ಆಯ್ಕೆಯನ್ನು ಆರಿಸಿ.

(1) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ನಾಲ್ಕು ಹೇಳಿಕೆಗಳು ಸರಿಯಾಗಿವೆ

**106.** ಕೆಳಗಿನವುಗಳಲ್ಲಿ ತಪ್ಪಾಗಿರುವ ಜೋಡಿಯನ್ನು ಗುರುತಿಸಿ.

(1) ಸಮಾನತೆಯ ಹಕ್ಕು – 14 ರಿಂದ 18ನೇ ವಿಧಿ

(2) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು – 25 ರಿಂದ 28ನೇ ವಿಧಿ

(3) ಸ್ವಾತಂತ್ರ್ಯದ ಹಕ್ಕು – 19 ರಿಂದ 21ನೇ ವಿಧಿ

(4) ಶೋಷಣೆಯ ವಿರುದ್ಧದ ಹಕ್ಕು – 23 ಮತ್ತು 24ನೇ ವಿಧಿ

**107.** ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**a.** 61ನೇ ಸಂವಿಧಾನ ತಿದ್ದುಪಡಿ ಕಾಯಿದೆಯು ಮತದಾನದ ಕನಿಷ್ಠ ವಯಸ್ಸನ್ನು 21 ವರ್ಷಗಳಿಂದ 18 ವರ್ಷಗಳಿಗೆ ಇಳಿಸಿದೆ.

**b.** ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ರಾಜ್ಯ ಚುನಾವಣಾ ಆಯೋಗಗಳು ನಡೆಸುತ್ತವೆ.

**c.** ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆಯು 1986 ರಲ್ಲಿ ಜಾರಿಗೆ ಬಂದಿತು.

(1) a ಸರಿ

(2) a ಮತ್ತು b ಸರಿ

(3) a ಮತ್ತು c ಸರಿ

(4) a, b ಮತ್ತು c ಸರಿ



SHIKARAT.COM

**108.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | ಪಟ್ಟಿ – II |
|---|---|
| **a.** ಭಾರತ ಚುನಾವಣಾ ಆಯೋಗದ ರಚನೆ | i. 352ನೇ ವಿಧಿ |
| **b.** ರಾಷ್ಟ್ರೀಯ ತುರ್ತುಪರಿಸ್ಥಿತಿ | ii. 21Aನೇ ವಿಧಿ |
| **c.** ಹಣಕಾಸಿನ ತುರ್ತುಪರಿಸ್ಥಿತಿ | iii. 324ನೇ ವಿಧಿ |
| **d.** ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ | iv. 360ನೇ ವಿಧಿ |
| | v. 356ನೇ ವಿಧಿ |

| | a | b | c | d |
|---|---|---|---|---|
| (1) | ii | v | iv | iii |
| (2) | iii | v | iv | ii |
| (3) | iii | i | iv | ii |
| (4) | i | iii | v | ii |

**109.** ಕೆಳಗೆ ನೀಡಿರುವ ಎಲ್ಲಾ ಹೇಳಿಕೆಗಳನ್ನು ಓದಿರಿ.

**a.** ಡಾ. ಡಿ. ಎಂ. ನಂಜುಂಡಪ್ಪ ಸಮಿತಿಯು ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ಸಂಬಂಧಿಸಿದೆ.

**b.** ಸುಚೇತಾ ಕೃಪಲಾನಿ ಮಹಾರಾಷ್ಟ್ರ ರಾಜ್ಯದ ಪ್ರಥಮ ಮಹಿಳಾ ಮುಖ್ಯಮಂತ್ರಿ.

**c.** ಇಂದಿರಾ ಗಾಂಧಿ ಭಾರತದ ಪ್ರಥಮ ಮಹಿಳಾ ಪ್ರಧಾನಮಂತ್ರಿ.

**d.** ವಿ. ಎಸ್. ರಮಾದೇವಿ ಕರ್ನಾಟಕ ರಾಜ್ಯದ ಪ್ರಥಮ ಮಹಿಳಾ ರಾಜ್ಯಪಾಲರು.

ಈ ಮೇಲಿನ ಎಲ್ಲಾ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾದ ಆಯ್ಕೆಯನ್ನು ಆರಿಸಿ.

(1) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ನಾಲ್ಕು ಹೇಳಿಕೆಗಳು ಸರಿಯಾಗಿವೆ

**110.** ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**a.** ವಿಶ್ವಸಂಸ್ಥೆ ಎಂಬ ಶಬ್ದವನ್ನು ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರು ಚಾಲ್ತಿಗೆ ತಂದರು.

**b.** ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಶಾಶ್ವತ ಸದಸ್ಯ ರಾಷ್ಟ್ರಗಳೆಂದರೆ ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಇಟಲಿ, ಫ್ರಾನ್ಸ್ ಮತ್ತು ಚೀನಾ.

**c.** ಅಂತಾರಾಷ್ಟ್ರೀಯ ನ್ಯಾಯಾಲಯವು 15 ಮಂದಿ ನ್ಯಾಯಾಧೀಶರನ್ನು ಒಳಗೊಂಡಿದೆ.

**d.** ವಿಶ್ವಸಂಸ್ಥೆಯ ಪ್ರಥಮ ಮಹಾಕಾರ್ಯದರ್ಶಿಯಾಗಿದ್ದ ಟ್ರಿಗ್ವೆಲೀ ಅವರು ಸ್ವೀಡನ್ ದೇಶದವರಾಗಿದ್ದಾರೆ.

(1) a, b ಮತ್ತು c ಸರಿ

(2) b, c ಮತ್ತು d ಸರಿ

(3) a, b ಮತ್ತು d ಸರಿ

(4) a ಮತ್ತು c ಸರಿ



SHIKARAT.COM

**111.** ಕೆಳಗಿನ ಹೇಳಿಕೆಗಳನ್ನು ಓದಿರಿ ಹಾಗೂ ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.

(1) ಎಮಿಲಿ ಡರ್ಕಿಮ್‌ರವರು ಸಮಾಜಶಾಸ್ತ್ರವನ್ನು ವಿಜ್ಞಾನವನ್ನಾಗಿ ಮಾಡಲು ಶ್ರಮಿಸಿದರು.

(2) 1914ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರವನ್ನು ಪರಿಚಯಿಸಲಾಯಿತು.

(3) 'ಕಲ್ಚರ್' ಎಂಬ ಪದವು ಲ್ಯಾಟಿನ್ ಭಾಷೆಯ 'ಕೋಲೆರೆ' ಎಂಬ ಪದದಿಂದ ಬಂದಿದೆ.

(4) ಮ್ಯಾಕ್ಸ್ ವೆಬರ್‌ರವರು ನೌಕರಶಾಹಿ ಮತ್ತು ಕ್ರಿಶ್ಚಿಯನ್ ಧರ್ಮದ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ ಮಾಡಿದರು.

**112.** ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ವಾಸಿಸುವ ಬುಡಕಟ್ಟು ಜನಾಂಗಗಳೆಂದರೆ

(1) ಗುರುಂಗ್, ಲಿಂಬಿ ಮತ್ತು ಲೆಪ್ಚಾ

(2) ಬೈಗಾ, ಖಾರಿಯಾ ಮತ್ತು ಖೊಂಡ

(3) ಕುಕಿ, ಮೈತ್ರೇಯಿ ಮತ್ತು ಅಪತಾನಿ

(4) ಜಾರ್‍ವಾ, ಓಂಗೇ ಮತ್ತು ಸೆಂತಿನ್ನೇಲಿ

**113.** ಕೆಳಗೆ ನೀಡಿರುವ ಎಲ್ಲಾ ಹೇಳಿಕೆಗಳನ್ನು ಓದಿರಿ.

**a.** ಪಿತೃಪ್ರಧಾನ ಕುಟುಂಬಗಳು ಪ್ರಾಚೀನ ಭಾರತ, ಚೀನಾ, ರೋಮ್, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದು, ಈಗಲೂ ಮುಂದುವರಿದುಕೊಂಡು ಬರುತ್ತಿವೆ.

**b.** ಕೇರಳ ರಾಜ್ಯದ ನಾಯರ್ ಸಮುದಾಯ ಹಾಗೂ ಭಾರತದ ಈಶಾನ್ಯ ರಾಜ್ಯಗಳ ಕೆಲವು ಆದಿವಾಸಿ ಸಮುದಾಯಗಳು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿವೆ.

**c.** ಸಂವಿಧಾನದ 27ನೇ ವಿಧಿಯು ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿದೆ.

**d.** 'ಮಾನವಕುಲ ತಾನೊಂದೇ ವಲಂ' ಎಂದು ಹೇಳಿದವರು ಪಂಪ.

ಈ ಮೇಲಿನ ಎಲ್ಲಾ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾದ ಆಯ್ಕೆಯನ್ನು ಆರಿಸಿ.

(1) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ನಾಲ್ಕು ಹೇಳಿಕೆಗಳು ಸರಿಯಾಗಿವೆ

**114.** ಬಾಲ ಕಾರ್ಮಿಕ ಪದ್ಧತಿಯ ಸಮಸ್ಯೆಯನ್ನು ತೊಡೆದುಹಾಕಲು ಕೈಗೊಂಡಿರುವ ಕ್ರಮಗಳಿಗೆ ಸಂಬಂಧಿಸಿದಂತೆ ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.

(1) 1988ರಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯನ್ನು ಜಾರಿಗೊಳಿಸಲಾಯಿತು.

(2) 1987ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿಯನ್ನು ಅನುಷ್ಠಾನಗೊಳಿಸಲಾಯಿತು.

(3) 2006ರಲ್ಲಿ ಬಾಲ ಕಾರ್ಮಿಕ/ಬಾಲ ಶ್ರಮ ನಿರ್ಮೂಲನ ಮತ್ತು ಪುನರ್ವಸತೀಕರಣ ಕಾಯ್ದೆಯು ಜಾರಿಗೆ ಬಂದಿತು.

(4) ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು 1985ರಲ್ಲಿ ಜಾರಿಗೊಳಿಸಲಾಯಿತು.



SHIKARAT.COM

115. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**a.** ಬಾಲ್ಯವಿವಾಹ ನಿಷೇಧ ಕಾಯಿದೆಯು 2006ರಲ್ಲಿ ಜಾರಿಗೆ ಬಂದಿತು.

**b.** ಭಾರತವು ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1993ರಲ್ಲಿ ಸಹಿ ಮಾಡಿತು.

**c.** ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆಯನ್ನು 1994ರಲ್ಲಿ ಜಾರಿಗೆ ತರಲಾಯಿತು.

**d.** ಮಕ್ಕಳ ಸಹಾಯವಾಣಿ ಸಂಖ್ಯೆ 1092 ಆಗಿದೆ.

(1) a ಮತ್ತು c ಸರಿ
(2) c ಮತ್ತು d ಸರಿ
(3) a, b ಮತ್ತು c ಸರಿ
(4) b, c ಮತ್ತು d ಸರಿ

116. ಅಲ್-ಗಜಲ್, ಸೂಬತ್ ಮತ್ತು ಅಟ್ಬಾರಗಳು ಇದರ ಉಪನದಿಗಳಾಗಿವೆ

(1) ಕಾಂಗೋ ನದಿ
(2) ನೈಜರ್ ನದಿ
(3) ನೈಲ್ ನದಿ
(4) ಜಾಂಬೆಜಿ ನದಿ

117. ದಕ್ಷಿಣ ಅಮೆರಿಕ ಖಂಡಕ್ಕೆ ಸಂಬಂಧಿಸಿದಂತೆ ತಪ್ಪಾಗಿರುವ ಹೇಳಿಕೆಯನ್ನು ಗುರುತಿಸಿ.

(1) ದಕ್ಷಿಣ ಅಮೆರಿಕ ಖಂಡದಲ್ಲಿ ಬ್ರೆಜಿಲ್ ಅತಿ ದೊಡ್ಡ ದೇಶವಾಗಿದೆ.
(2) ಬೊಲಿವಿಯಾ ಮತ್ತು ಪರಾಗ್ವೆ ದೇಶಗಳನ್ನು ಹೊರತುಪಡಿಸಿ ದಕ್ಷಿಣ ಅಮೆರಿಕ ಖಂಡದ ಎಲ್ಲಾ ದೇಶಗಳು ಕರಾವಳಿ ತೀರವನ್ನು ಹೊಂದಿವೆ.
(3) ವಿಶ್ವದ ಅತ್ಯಂತ ಎತ್ತರವಾದ ಜಲಪಾತವಾದ ಏಂಜಲ್ ಜಲಪಾತವು ದಕ್ಷಿಣ ಅಮೆರಿಕ ಖಂಡದಲ್ಲಿದೆ.
(4) ಭೂಮಿಯ ಮೇಲಿನ ಅತಿ ಶುಷ್ಕ ಪ್ರದೇಶವಾಗಿರುವ ಅಟಕಾಮ ಮರುಭೂಮಿಯು ದಕ್ಷಿಣ ಅಮೆರಿಕ ಖಂಡದ ಬ್ರೆಜಿಲ್‌ನಲ್ಲಿದೆ

118. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| **ಪಟ್ಟಿ – I** | **ಪಟ್ಟಿ – II** |
|---|---|
| **a.** ಲೂ | i. ಫ್ರಾನ್ಸ್ |
| **b.** ಚಿನೂಕ್ | ii. ಆಸ್ಟ್ರೇಲಿಯಾ |
| **c.** ಬ್ರಿಕ್ ಫೀಲ್ಡರ್ | iii. ಭಾರತ |
| **d.** ಮಿಸ್ಟ್ರಲ್ | iv. ಯು. ಎಸ್. ಎ. |
| | v. ಆಲ್ಪ್ಸ್ ಪರ್ವತಗಳು |

| | **a** | **b** | **c** | **d** |
|---|---|---|---|---|
| (1) | iii | ii | v | iv |
| (2) | iii | iv | ii | i |
| (3) | ii | iv | iii | v |
| (4) | v | ii | iii | i |



SHIKARAT.COM

119. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

a. ಕರ್ನಾಟಕದ ಕರಾವಳಿ ತೀರದ ಉದ್ದ 320 ಕಿ.ಮೀ.

b. ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಫಲವಾಗಿ ಕರ್ನಾಟಕ ರಾಜ್ಯಕ್ಕೆ ಸಮುದ್ರ ತೀರ ಹಾಗೂ ಕರಾವಳಿ ಮೈದಾನ ಲಭ್ಯವಾಯಿತು.

c. ಮುಳ್ಳಯ್ಯನಗಿರಿಯು ಕರ್ನಾಟಕದಲ್ಲೇ ಅತ್ಯಂತ ಎತ್ತರವಾದ ಶಿಖರವಾಗಿದೆ.

d. ಚಿತ್ರದುರ್ಗ ಜಿಲ್ಲೆಯ ಮಧುಗಿರಿ ಬೆಟ್ಟವು ಏಷ್ಯಾ ಖಂಡದಲ್ಲಿಯೇ ಅತಿ ದೊಡ್ಡ ಏಕಶಿಲಾ ಬೆಟ್ಟವಾಗಿದೆ.

(1) a, b ಮತ್ತು c ಸರಿ
(2) b, c ಮತ್ತು d ಸರಿ
(3) a, b ಮತ್ತು d ಸರಿ
(4) a ಮತ್ತು c ಸರಿ

120. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಆರಿಸಿ.

(1) ತುಂಗಭದ್ರಾ ಅಣೆಕಟ್ಟು – ವಿಜಯನಗರ ಜಿಲ್ಲೆ
(2) ಹಾರಂಗಿ ಅಣೆಕಟ್ಟು – ಕೊಡಗು ಜಿಲ್ಲೆ
(3) ಕೃಷ್ಣರಾಜಸಾಗರ ಅಣೆಕಟ್ಟು – ಮೈಸೂರು ಜಿಲ್ಲೆ
(4) ಕಾರಂಜಾ ಅಣೆಕಟ್ಟು – ಬೀದರ್ ಜಿಲ್ಲೆ

121. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

a. ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಇವು ಬಾಗಲಕೋಟೆ ಜಿಲ್ಲೆಯಲ್ಲಿವೆ.

b. ನಾಗರಹೊಳೆ ರಾಷ್ಟ್ರೀಯ ಉದ್ಯಾನವನವನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ಎಂದೂ ಕರೆಯುತ್ತಾರೆ.

c. 'ಹೊರನಾಡು' ಯಾತ್ರಾ ಸ್ಥಳವು ಚಿಕ್ಕಮಗಳೂರು ಜಿಲ್ಲೆಯಲ್ಲಿದೆ.

d. ಮಂಡಗದ್ದೆ ಪಕ್ಷಿಧಾಮವು ಶಿವಮೊಗ್ಗ ಜಿಲ್ಲೆಯಲ್ಲಿದೆ.

(1) a ಮತ್ತು b ಸರಿ
(2) a, b ಮತ್ತು d ಸರಿ
(3) a ಮತ್ತು d ಸರಿ
(4) a, b, c ಮತ್ತು d ಸರಿ

122. ಕೆಳಗಿನ ಹೇಳಿಕೆಗಳನ್ನು ಓದಿರಿ.

a. ಈ ಯೋಜನೆಯ ಮುಖ್ಯ ಉದ್ದೇಶ ಪ್ರವಾಹಗಳ ನಿಯಂತ್ರಣ.

b. ಇದು ಭಾರತ ಮತ್ತು ನೇಪಾಳ ರಾಷ್ಟ್ರಗಳ ನಡುವಿನ ಜಂಟಿ ಯೋಜನೆಯಾಗಿದೆ.

c. ಭಾರತ ಮತ್ತು ನೇಪಾಳದ ಗಡಿಯಲ್ಲಿ ಬರುವ 'ಹನುಮಾನ್ ನಗರ' ಎಂಬಲ್ಲಿ ಈ ಯೋಜನೆಯ ಅಣೆಕಟ್ಟನ್ನು ನಿರ್ಮಿಸಲಾಗಿದೆ.

ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

(1) ದಾಮೋದರ ನದಿ ಕಣಿವೆ ಯೋಜನೆ
(2) ಭಾಕ್ರಾನಂಗಲ್ ಯೋಜನೆ
(3) ಕೋಸಿ ಯೋಜನೆ
(4) ಹಿರಾಕುಡ್ ಯೋಜನೆ



SHIKARAT.COM

123. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಗುರುತಿಸಿ.

(1) ಕಾಂಡ್ಲ ಬಂದರು – ಗುಜರಾತ್

(2) ತುತುಕುಡಿ/ಟ್ಯುಟಿಕೋರಿನ್ ಬಂದರು – ಕೇರಳ

(3) ಪಾರಾದೀಪ ಬಂದರು – ಒಡಿಶಾ

(4) ಹಾಲ್ದಿಯಾ ಬಂದರು – ಪಶ್ಚಿಮ ಬಂಗಾಳ

124. ಪಟ್ಟಿ – Iನ್ನು ಪಟ್ಟಿ – IIರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | ಪಟ್ಟಿ – II |
|---|---|
| a. ಗೋದಾವರಿ | i. ಮುಲ್ತಾಯ್ |
| b. ಕೃಷ್ಣಾ | ii. ಸಿಹಾವ |
| c. ತಪತಿ/ತಾಪಿ | iii. ತ್ರಯಂಬಕೇಶ್ವರ |
| d. ಮಹಾನದಿ | iv. ಚಂದ್ರಭಾಗ |
| | v. ಮಹಾಬಲೇಶ್ವರ |

| | a | b | c | d |
|---|---|---|---|---|
| (1) | iii | v | i | ii |
| (2) | iii | v | iv | ii |
| (3) | v | iii | i | ii |
| (4) | iii | v | iv | i |

125. 'ನೊಕ್ರೆಕ್' ಜೈವಿಕ ಸಂರಕ್ಷಣಾ ವಲಯವು ಈ ಕೆಳಕಂಡ ರಾಜ್ಯದಲ್ಲಿದೆ

(1) ಉತ್ತರಾಖಂಡ
(2) ಮಧ್ಯಪ್ರದೇಶ
(3) ಮೇಘಾಲಯ
(4) ಒಡಿಶಾ

126. ದೇವನಹಳ್ಳಿಯಲ್ಲಿ ಹೆಚ್ಚಾಗಿ ಬೆಳೆಯುವ ಚಕ್ಕೋತ ಹಣ್ಣುಗಳನ್ನು ಶಿಮ್ಲಾದಲ್ಲಿ ದೊರೆಯುವಂತೆ ಮಾಡಿದಾಗ ಸೃಷ್ಟಿಯಾಗುವ ಉಪಯುಕ್ತತೆಯನ್ನು ಹೀಗೆ ಕರೆಯುವರು

(1) ಮೂಲೋಕ ಉಪಯುಕ್ತತೆ
(2) ಆಕಾರೋಪ ಉಪಯುಕ್ತತೆ
(3) ಸಮಯೋಪಯುಕ್ತತೆ
(4) ಸ್ಥಳ ಉಪಯುಕ್ತತೆ

127. 'ಮೊನೆಟ ಜುನೊ' ಎಂಬ ಪದವು

(1) ಗ್ರೀಕ್ ಪದ
(2) ರೋಮನ್ ಪದ
(3) ಲ್ಯಾಟಿನ್ ಪದ
(4) ಫ್ರೆಂಚ್ ಪದ



SHIKARAT.COM

128. KPTCL ನ ವಿಸ್ತೃತ ರೂಪ

(1) ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್

(2) ಕರ್ನಾಟಕ ಪವರ್ ಟ್ರಾನ್ಸ್‌ಪೋರ್ಟೇಷನ್ ಕಾರ್ಪೊರೇಷನ್ ಲಿಮಿಟೆಡ್

(3) ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಂಪನಿ ಲಿಮಿಟೆಡ್

(4) ಕರ್ನಾಟಕ ಪವರ್ ಟ್ರಾನ್ಸ್‌ಪೋರ್ಟೇಷನ್ ಕಂಪನಿ ಲಿಮಿಟೆಡ್

129. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಆಯ್ಕೆ ಮಾಡಿ.

(1) 1ನೇ ಪಂಚವಾರ್ಷಿಕ ಯೋಜನೆ – 1951 – 56

(2) 5ನೇ ಪಂಚವಾರ್ಷಿಕ ಯೋಜನೆ – 1974 – 79

(3) 6ನೇ ಪಂಚವಾರ್ಷಿಕ ಯೋಜನೆ – 1980 – 85

(4) 12ನೇ ಪಂಚವಾರ್ಷಿಕ ಯೋಜನೆ – 2012 – 17

130. ಪಟ್ಟಿ – Iನ್ನು ಪಟ್ಟಿ – IIರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | ಪಟ್ಟಿ – II |
|---|---|
| a. ನೀಲಿ ಕ್ರಾಂತಿ | i. ಎಣ್ಣೆ ಬೀಜಗಳ ಉತ್ಪಾದನೆ |
| b. ಹಳದಿ ಕ್ರಾಂತಿ | ii. ಮೊಟ್ಟೆಗಳ ಉತ್ಪಾದನೆ |
| c. ಬೆಳ್ಳಿ ಕ್ರಾಂತಿ | iii. ಮೀನುಗಳ ಉತ್ಪಾದನೆ |
| d. ಬಿಳಿ ಕ್ರಾಂತಿ | iv. ಬಾಸ್ಮತಿ ಅಕ್ಕಿಯ ಉತ್ಪಾದನೆ |
| | v. ಹಾಲಿನ ಉತ್ಪಾದನೆ |

| | a | b | c | d |
|---|---|---|---|---|
| (1) | iii | i | v | ii |
| (2) | ii | iv | i | iii |
| (3) | iii | i | ii | iv |
| (4) | iii | i | ii | v |

131. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.

(1) ಭಾರತದಲ್ಲಿ ಹಣಕಾಸು ವರ್ಷವು ಆ ವರ್ಷದ ಏಪ್ರಿಲ್ 1 ರಂದು ಪ್ರಾರಂಭವಾಗಿ, ಅದರ ಮುಂದಿನ ವರ್ಷದ ಮಾರ್ಚ್ 31 ರಂದು ಮುಕ್ತಾಯವಾಗುತ್ತದೆ.

(2) ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭವು ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯವಾಗಿದೆ.

(3) ನಾಗರಿಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಬಡ್ಡಿ ಪಾವತಿ ಇವುಗಳು ಯೋಜನಾ ವೆಚ್ಚದ ಭಾಗವಾಗಿವೆ.

(4) ವೈಯಕ್ತಿಕ ಆದಾಯ ತೆರಿಗೆಯು ಪ್ರತ್ಯಕ್ಷ ತೆರಿಗೆಯಾಗಿದೆ.



SHIKARAT.COM

132. ಪ್ರಪಂಚದ ಮೊದಲ ಸಹಕಾರ ಸಂಘವು ರಾಬರ್ಟ್ ಓವನ್‌ರವರಿಂದ ಸ್ಥಾಪಿಸಲ್ಪಟ್ಟ ವರ್ಷ

(1) 1842 (2) 1843 (3) 1844 (4) 1845

133. ಈ ಕೆಳಕಂಡ ಸಂವಿಧಾನ ತಿದ್ದುಪಡಿ ಕಾಯಿದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

(1) 72ನೇ ತಿದ್ದುಪಡಿ ಕಾಯಿದೆ
(2) 73ನೇ ತಿದ್ದುಪಡಿ ಕಾಯಿದೆ
(3) 74ನೇ ತಿದ್ದುಪಡಿ ಕಾಯಿದೆ
(4) 75ನೇ ತಿದ್ದುಪಡಿ ಕಾಯಿದೆ

134. ವಿಶ್ವ ಗ್ರಾಹಕ ಹಕ್ಕುಗಳ ದಿನವನ್ನು ಈ ದಿನದಂದು ಆಚರಿಸಲಾಗುವುದು

(1) ಮಾರ್ಚ್ 13
(2) ಮಾರ್ಚ್ 14
(3) ಮಾರ್ಚ್ 15
(4) ಮಾರ್ಚ್ 16

135. NABARD (ನಬಾರ್ಡ್) ನ ವಿಸ್ತೃತ ರೂಪ

(1) ನ್ಯಾಷನಲ್ ಬ್ಯಾಂಕ್ ಫಾರ್ ಅಕ್ವಾಕಲ್ಚರ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್
(2) ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಆ್ಯಂಡ್ ರೀಜನಲ್ ಡೆವಲಪ್‌ಮೆಂಟ್
(3) ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಆ್ಯಂಡ್ ರೋಡ್ ಡೆವಲಪ್‌ಮೆಂಟ್
(4) ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್

136. ಜಿಗ್‌ಸಾ ಬೋಧನಾ ವಿಧಾನ ತಂತ್ರವನ್ನು ಮೊದಲಿಗೆ ಅಭಿವೃದ್ಧಿಪಡಿಸಿದವರು

(1) ಎಲಿಯಟ್ ಅರಾನ್‌ಸನ್
(2) ಷರಾನ್ ಆ್ಯಂಡ್ ಷರಾನ್
(3) ಜಾನ್‌ಸನ್ ಆ್ಯಂಡ್ ಜಾನ್‌ಸನ್
(4) ಜೇಮ್ಸ್‌ಸೆನ್

137. ''ಸೀಮಿತ ಪ್ರಮಾಣದ ವೇಳೆಯಲ್ಲಿ ಸೀಮಿತ ಅಳತೆಯ ವರ್ಗಕ್ಕೆ ಕೈಗೊಳ್ಳುವ ಬೋಧನಾ ಚಟುವಟಿಕೆಯೇ''

(1) ತಂಡ ಬೋಧನೆ
(2) ಸೂಕ್ಷ್ಮ ಬೋಧನೆ
(3) ಪರಿಹಾರ ಬೋಧನೆ
(4) ಸಮಗ್ರ ಬೋಧನೆ (Macro Teaching)

138. ಕೋಲ್ಬ್‌ರವರ 'ಅನುಭವಾತ್ಮಕ ಕಲಿಕೆ'ಯ ವೃತ್ತವು ಒಳಗೊಂಡಿರುವ ಒಟ್ಟು ಮೂಲಾಂಶಗಳ ಸಂಖ್ಯೆ

(1) 6 (2) 5 (3) 4 (4) 3

139. ಸಮಸ್ಯಾ ಪರಿಹಾರ ವಿಧಾನದ ಆರನೇ ಹಂತವು

(1) ವಸ್ತುನಿಷ್ಠ ಮಾಹಿತಿಗಳ ಸಂಗ್ರಹಣೆ
(2) ಮಾಹಿತಿಗಳ ಸಂಘಟನೆ
(3) ಸಮಸ್ಯೆಗೆ ಪರಿಹಾರ
(4) ಸಮಸ್ಯೆಯ ಸ್ಪಷ್ಟೀಕರಣ



SHIKARAT.COM

140. ಈ ರೀತಿಯ ಪರೀಕ್ಷೆಗಳಲ್ಲಿ, ವಿದ್ಯಾರ್ಥಿಯು ಗುಂಪಿಗೆ ಸೇರದ ಪದವನ್ನು ಪತ್ತೆ ಹಚ್ಚಿ ಅದನ್ನು ಬರೆಯಬೇಕು

(1) ಸಾಧಾರಣ ಸ್ಮರಣೆ ಪರೀಕ್ಷೆ
(2) ವರ್ಗೀಕರಣ ಪರೀಕ್ಷೆ
(3) ಅನುಕ್ರಮ ಸಂಧಾನ ಪರೀಕ್ಷೆ
(4) ಹೊಂದಿಸಿ ಬರೆಯಿರಿ

141. ''ರಾಜ್ಯಶಾಸ್ತ್ರವು ಸಮಾಜ ವಿಜ್ಞಾನದ ಭಾಗವಾಗಿದೆ. ಇದು ರಾಜ್ಯಗಳ ಸ್ಥಾಪನೆ ಮತ್ತು ಸರ್ಕಾರದ ತತ್ವಗಳನ್ನು ಅಧ್ಯಯನ ಮಾಡುತ್ತದೆ'' ಎಂದು ವ್ಯಾಖ್ಯಾನಿಸಿದವರು

(1) ಆರ್. ಎನ್. ಗಿಲ್‌ಕ್ರಿಸ್ಟ್
(2) ಜೆ. ಡಬ್ಲ್ಯೂ. ಗಾಡ್ನರ್
(3) ಆ್ಯಡಂ ಸ್ಮಿತ್
(4) ಜಾವೆಟ್ ಜೌಲ್

142. ಕೆಳಗಿನ ಒಂದು ಸಮಿತಿಯು 'ಸಮಾಜ ವಿಜ್ಞಾನ ಪಠ್ಯಕ್ರಮವು ಇತಿಹಾಸ, ಭೂಗೋಳ, ಪೌರನೀತಿ, ಅರ್ಥಶಾಸ್ತ್ರದ ಜೊತೆಗೆ ಸಮಾಜಶಾಸ್ತ್ರವನ್ನು ಒಳಗೊಂಡಿರಬೇಕು' ಎಂದು ಶಿಫಾರಸ್ಸು ಮಾಡಿದೆ

(1) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2000
(2) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 1988
(3) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005
(4) ರಾಷ್ಟ್ರೀಯ ಶಿಕ್ಷಣ ನೀತಿ – 1986

143. **ಹೇಳಿಕೆ (A) :** ಗುರಿಗಳು ನಿರ್ದಿಷ್ಟ ಪಠ್ಯವಿಷಯದ ಆಯ್ಕೆಗೆ ಸಹಾಯಕಾರಿಯಲ್ಲ.

**ಹೇಳಿಕೆ (B) :** ಉದ್ದೇಶಗಳು ನಿರ್ದಿಷ್ಟ ಪಠ್ಯವಿಷಯದ ಆಯ್ಕೆಗೆ ಸಹಾಯಕಾರಿಯಾಗಿದೆ.

(1) ಹೇಳಿಕೆ (A) ಸರಿ, ಹೇಳಿಕೆ (B) ತಪ್ಪು
(2) ಹೇಳಿಕೆ (A) ತಪ್ಪು, ಹೇಳಿಕೆ (B) ಸರಿ
(3) ಹೇಳಿಕೆ (A) ಸರಿ, ಹೇಳಿಕೆ (B) ಸರಿ
(4) ಹೇಳಿಕೆ (A) ತಪ್ಪು, ಹೇಳಿಕೆ (B) ತಪ್ಪು

144. ಘಟಕ ಪರೀಕ್ಷೆಯಲ್ಲಿ ಇದು 'ಪ್ರಶ್ನೆ ಪತ್ರಿಕೆಯ ಕನ್ನಡಿಯಂತೆ'

(1) ಘಟಕ ಪರೀಕ್ಷೆಯ ಉದ್ದೇಶಗಳು
(2) ಘಟಕ ಪರೀಕ್ಷೆಯ ನೀಲಿ ನಕಾಶೆ
(3) ಪ್ರಶ್ನೆಗಳಿಗೆ ಅಂಕ ಪರಿಮಾಣ
(4) ವಿಷಯಕ್ಕೆ ಅಂಕ ಪರಿಮಾಣ

145. ಕಲಿಕೆಯ ಯಾವುದೇ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಸಫಲತೆ ಮತ್ತು ವಿಫಲತೆಗಳನ್ನು ಗುರುತಿಸಲು ಸಹಾಯಕಾರಿಯಾಗುವ ಸಾಧನಾ ಪರೀಕ್ಷೆಯೇ

(1) ವಸ್ತುನಿಷ್ಠ ಮಾದರಿ ಪರೀಕ್ಷೆ
(2) ನೈದಾನಿಕ ಪರೀಕ್ಷೆ
(3) ಘಟಕ ಪರೀಕ್ಷೆ
(4) ಪ್ರಬಂಧ ಮಾದರಿ ಪರೀಕ್ಷೆ



SHIKARAT.COM

146. ವಿದ್ಯಾರ್ಥಿಗಳಲ್ಲಿ ಸ್ಥಳ ಪ್ರಜ್ಞೆಯನ್ನು ಬೆಳೆಸಲು ಕೆಳಗಿನವುಗಳಲ್ಲಿ ಒಂದು ಸೂಕ್ತ ಸಾಧನವಲ್ಲ

(1) ಭೂಪಟಗಳು
(2) ಅಟ್ಲಾಸ್‌ಗಳು
(3) ಗೋಳಗಳು
(4) ಕಾಲರೇಖೆಗಳು

147. ''ಸಮಾಜವಿಜ್ಞಾನವು ಮಾನವ ಸಂಬಂಧಗಳ ಅಧ್ಯಯನವಾಗಿದೆ'', ಎಂದು ವ್ಯಾಖ್ಯಾನಿಸಿದವರು

(1) ಮಿಚೆಲ್ಸ್
(2) ಜರೋಲಿಮಿಕ್
(3) ಪೀಟರ್ ಲೂಯಿಸ್
(4) ಫೇರ್‌ಚೈಲ್ಡ್

148. ಈ ಕೆಳಗಿನವುಗಳಲ್ಲಿ ಒಂದು ಕ್ರಮಾನುಗತ ಬೋಧನೆಯು ನೇರವಾಗಿ ಕ್ರಿಯಾಜನ್ಯ ಅನುಬಂಧ ಕಲಿಕೆಯ ಸಿದ್ಧಾಂತಕ್ಕೆ ಸಂಬಂಧಿಸಿದೆ

(1) ಶಾಖೀಕೃತ ಕಾರ್ಯಸರಣಿ ಯೋಜನೆ
(2) ರೇಖಾತ್ಮಕ ಕಾರ್ಯಸರಣಿ ಯೋಜನೆ
(3) ಮೆಥೆಟಿಕ್ಸ್ ಕಾರ್ಯಸರಣಿ ಯೋಜನೆ
(4) ಗಣಕಯಂತ್ರ ಸಹಾಯಕ ಬೋಧನೆ

149. ಶಾಲೆಯನ್ನು ಸಮುದಾಯದೆಡೆಗೆ ಕೊಂಡೊಯ್ಯದ ಸಮುದಾಯ ಕಾರ್ಯಕ್ರಮ

(1) ಕ್ಷೇತ್ರ ಪ್ರವಾಸವನ್ನು ಆಯೋಜಿಸುವುದು
(2) ಸಮುದಾಯ ಸಮೀಕ್ಷೆ
(3) ಸಮುದಾಯದ ಸಂಪನ್ಮೂಲ ವ್ಯಕ್ತಿಯನ್ನು ಶಾಲೆಗೆ ಆಹ್ವಾನಿಸುವುದು
(4) ಸಮುದಾಯದಲ್ಲಿ ಸಮಾಜ ಸೇವಾ ಕಾರ್ಯಕ್ರಮ

150. ಪಟ್ಟಿ – Aಯನ್ನು ಪಟ್ಟಿ – Bಯೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – A | ಪಟ್ಟಿ – B |
|---|---|
| a. ಪೀಠಿಕೆ | i. ಬಳಕೆಯ ನಿಯಮ |
| b. ಉದ್ದೇಶ ನಿರೂಪಣೆ | ii. ಸಿದ್ಧತಾ ನಿಯಮ |
| c. ಪಾಠದ ಬೆಳವಣಿಗೆ | iii. ಉದ್ದೇಶ ನಿಯಮ |
| d. ಪುನರಾವರ್ತನೆ | iv. ಅಭ್ಯಾಸ ನಿಯಮ |

(1) a – i, b – ii, c – iii, d – iv
(2) a – ii, b – iii, c – iv, d – i
(3) a – iii, b – i, c – ii, d – iv
(4) a – i, b – iii, c – iv, d – ii



SHIKARAT.COM